ಪ್ರಕಟಣೆ-227

# ಬೇಸಾಯಶಾಸ್ತ್ರ
# ಪಾರಿಭಾಷಿಕ ಶಬ್ದಕೋಶ

ಪ್ರಾಯೋಜನೆ ಮುಂದಾಳು
ಎಚ್. ಕೆ. ನರಸಿಂಹೇಗೌಡ
ಸಿ. ಕೆ. ಕುಮುದಿನಿ

ಪ್ರಾಯೋಜನೆ ಸಹಭಾಗಿ
ಉಷಾಕಿರಣ್

1964

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560 024

ಪ್ರಕಟಣೆ – 227

# ಬೇಸಾಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ

ಪ್ರಾಯೋಜನೆ ಮುಂದಾಳು : ಎಚ್. ಕೆ. ನರಸಿಂಹೇಗೌಡ
ಸಿ. ಕೆ. ಕುಮುದಿನಿ

ಪ್ರಾಯೋಜನೆ ಸಹಭಾಗಿ : ಉಷಾಕಿರಣ್

2001

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560 024

**ಬೇಸಾಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ** (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಪ್ರಕಾಶಿತ), ಪ್ರಥಮ ಮುದ್ರಣ : 2001
ಪ್ರತಿಗಳು : 1000, ಪುಟಗಳು : viii+106

ಬೆಲೆ ರೂ. : 36–00

© ಕೃಷಿ ವಿಶ್ವವಿದ್ಯಾನಿಲಯ. ಬೆಂಗಳೂರು.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಕನ್ನಡ ಅಧ್ಯಯನ ವಿಭಾಗದ ಸಂಶೋಧನ ಪ್ರಾಯೋಜನೆ ಸಂಖ್ಯೆ ಡಿ. ಆರ್. ಯುಎಎಸ್. ಕೆ-4-1992ರ ಫಲವಾಗಿ ಇದು ಸಂಕಲನಗೊಂಡಿದೆ.

ಮುದ್ರಣ

**ನ್ಯೂ ಬೆಂಗಳೂರು ಪ್ರಿಂಟರ್ಸ್**
ಮಲ್ಲೇಶ್ವರಂ, ಬೆಂಗಳೂರು-560 003

# ಕುಲಪತಿಗಳ ಹಾರೈಕೆ

ಕನ್ನಡ ಅಧ್ಯಯನ ವಿಭಾಗ ಪ್ರಾರಂಭವಾಗಿ 30 ವರ್ಷಗಳು ಸಂದಿವೆ. 1964 ರಷ್ಟು ಹಿಂದೆಯೇ ಶಿಕ್ಷಣ ಮಾಧ್ಯಮ ಪ್ರಾದೇಶಿಕ ಭಾಷೆಗಳಲ್ಲಿ ನಡೆಯಬೇಕೆಂಬ ತೀರ್ಮಾನವನ್ನು ಸಂಸತ್ತು ಕೈಗೊಂಡಿದ್ದು, ಆದನ್ನು ಆಚರಣೆಗೆ ತರುವ ಪ್ರಯತ್ನ ರಾಷ್ಟ್ರಾದ್ಯಂತ ನಡೆದಿದೆ. ಈ ದಿಸೆಯಲ್ಲಿ ನಮ್ಮ ವಿಶ್ವವಿದ್ಯಾನಿಲಯದಲ್ಲೂ 1970 ರಲ್ಲಿ ಪ್ರಾರಂಭಿಸಲಾದ ಕನ್ನಡ ಅಧ್ಯಯನ ವಿಭಾಗದಲ್ಲಿ ಕನ್ನಡವನ್ನು ಕೃಷಿ ಶಿಕ್ಷಣ ಮಾಧ್ಯಮವಾಗುವಂತೆ ಮಾಡುವ ಪ್ರಥಮ ಹೆಜ್ಜೆಯಾಗಿ ಕೃಷಿ ವಿಜ್ಞಾನದ ವಿವಿಧ ವಿಷಯಗಳ ಮೇಲೆ ಕನ್ನಡದಲ್ಲಿ ಪತ್ಯ ಪುಸ್ತಕಗಳನ್ನು ನಿರ್ಮಿಸುವ ಕಾರ್ಯ ನಡೆದಿದೆ. ಕನ್ನಡ ಅಧ್ಯಯನ ವಿಭಾಗ ಈ ಅವಧಿಯಲ್ಲಿ ಇನ್ನೂರಕ್ಕೂ ಮಿಗಿಲಾಗಿ ಕೃಷಿ ವಿಜ್ಞಾನ ಪತ್ಯ ಹಾಗೂ ಪರಾಮರ್ಶನ ಗ್ರಂಥಗಳನ್ನು ಪ್ರಕಟಿಸಿದೆ. ಇವುಗಳಲ್ಲಿ ಕೆಲವು ಪುಸ್ತಕಗಳ ಪ್ರತಿಗಳು ಮುಗಿದು, ಪುನರ್ ಮುದ್ರಣಗೊಂಡಿವೆ; ಮತ್ತೆ ಕೆಲವು ಪುಸ್ತಕಗಳ ಪುನರ್ ಮುದ್ರಣ ಕಾರ್ಯ ನಡೆಯಬೇಕಿದೆ. ಕೃಷಿ ವಿಜ್ಞಾನ ಪ್ರಸಾರಕ್ಕೆ ಪುಸ್ತಕಗಳು ನಿಡುಗಾಲದ ದಾಖಲೆಗಳಾಗಿರುತ್ತವೆ. ಇವು ವಿದ್ಯಾರ್ಥಿಗಳಿಗೂ, ರೈತರಿಗೂ ಅರಿವಿನ ಕೈಪಿಡಿಗಳು. ಹಲವು ಹತ್ತು ಜನತೆಯ ಕೈಯಲ್ಲಿ ಬೆಳಗಬಹುದಾದ ಶಾಶ್ವತ ಐತಿಹಾಸಿಕ ದಾಖಲೆಗಳೂ ಹೌದು.

ಕೃಷಿ ವಿಜ್ಞಾನಗಳ ಎಲ್ಲ ವಿಷಯಗಳ ಮೇಲೂ ಪತ್ಯ ಪುಸ್ತಕಗಳು ಪರಿಪೂರ್ಣವಾಗಿ ಪ್ರಕಟವಾಗಬೇಕಿದೆ. ಇದು ಕೃಷಿ ಕ್ಷೇತ್ರದಲ್ಲಿಯ ಅಧ್ಯಾಪಕರು ಮತ್ತು ವಿಜ್ಞಾನಿಗಳ ಮೇಲಿನ ಹೆಚ್ಚಿನ ಹೊಣೆಯಾಗಿರುತ್ತದೆ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಉತ್ತಮ ಬರಹಗಾರರಿದ್ದಾರೆ. ಆದಷ್ಟೂ ಕೆಲಸವಾಗಬೇಕಾಗಿದೆ. ಇದು ತಾಂತ್ರಿಕ ಬರಹಗಾರರ ಅಂತರಂಗದ ಆಸಕ್ತಿ, ಕನ್ನಡದಲ್ಲಿ ಪತ್ಯಪುಸ್ತಕಗಳನ್ನು ಬರೆಯುವ ವೃತ್ತಿಪ್ರೇಮ, ಕರ್ತವ್ಯನಿಷ್ಠೆ ಹಾಗೂ ದೃಢಚಿತ್ತಗಳಿಂದಷ್ಟೇ ಸಾಧ್ಯವಾದೀತು. ಕೃಷಿ ವಿಜ್ಞಾನದ ಎಲ್ಲ ವಿಷಯಗಳ ಮೇಲೆ ಕನ್ನಡದಲ್ಲಿ ಪತ್ಯ ಪುಸ್ತಕಗಳು ಪ್ರಕಟವಾದಾಗ ಮಾತ್ರ ಎಲ್ಲ ವಿಷಯಗಳಲ್ಲೂ ಕನ್ನಡ ಮಾಧ್ಯಮದಲ್ಲಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡಲು ಸಾಧ್ಯ.

ಕೃಷಿ ವಿಶ್ವವಿದ್ಯಾನಿಲಯದಲ್ಲಿರುವ ಪ್ರತಿಯೊಬ್ಬ ಶಿಕ್ಷಕರು ತಮ್ಮ ಸೇವಾವಧಿಯಲ್ಲಿ ತಮ್ಮ ತಜ್ಞತೆಯ ವಿಷಯದಲ್ಲಿ ಒಂದಾದರೂ ಸಾರ್ಥಕ ಕೃತಿಯನ್ನು ರಚಿಸುವ ದೃಢನಿಲವು ಕೈಗೊಂಡು ಈ ಮಹಾನ್ ಕಾರ್ಯದಲ್ಲಿ ವಾಸ್ತವವಾಗಿ ಕೈಗೂಡಿಸುವರೆಂಬ ನಂಬಿಕೆ ಇದೆ. ಕರ್ನಾಟಕದಲ್ಲಿ ಕೃಷಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಸರ್ವರೂ ಕೃಷಿಕನ ನುಡಿಯಲ್ಲೇ ವ್ಯವಹರಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಕನ್ನಡ

ಮಾಧ್ಯಮದಲ್ಲಿ ಕಲಿತು ತೇರ್ಗಡೆಯಾದ ವಿದ್ಯಾರ್ಥಿಗಳು ರೈತರೊಡನೆ ವ್ಯವಹರಿಸುವಾಗ ಹೆಚ್ಚು ಪರಿಣಾಮಕಾರಿಯಾಗುತ್ತಾರೆ. ಈ ವಿಷಯದಲ್ಲಿ ನಮ್ಮ ಕೃಷಿ ವಿಶ್ವವಿದ್ಯಾನಿಲಯದ ಸಾಧನೆ ಮೆಚ್ಚುವಂಥದ್ದಾಗಿದೆ.

ಈಗ ಪ್ರಕಟವಾಗುತ್ತಿರುವ **ಬೇಸಾಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ** ಪುಸ್ತಕ ಎಲ್ಲ ವಿದ್ಯಾರ್ಥಿಗಳು, ಬೋಧಕರು, ವಿಜ್ಞಾನಿಗಳು ಮತ್ತು ರೈತರಿಗೆ ಉಪಯುಕ್ತವಾಗುವುದೆಂದು ಆಶಿಸುತ್ತೇನೆ.

**ಎಸ್. ಬಿಸಲಯ್ಯ**
ಕುಲಪತಿಗಳು

ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 065

## ಸಂಪಾದಕರ ಮಾತು

ಇದು ವಿಜ್ಞಾನಯುಗ. ಎಲ್ಲ ಕೆಲಸಕಾರ್ಯಗಳು ವಿಜ್ಞಾನದ ತಳಹದಿಯ ಮೇಲೆ ಜರುಗುತ್ತಿವೆ. ವಿಜ್ಞಾನದ ವಿವಿಧ ಮುಖಗಳ ಪರಿಚಯ, ವಿವರಗಳೆಲ್ಲ ಬಹುವಾಗಿ ಆಂಗ್ಲಭಾಷೆಯಲ್ಲಿರುವುದು ಸರ್ವವಿದಿತ. ಅಲ್ಲಿರುವ ವಿವಿಧ ವಿಶಿಷ್ಟ ತಾಂತ್ರಿಕ ಪದಗಳು ವಿಶ್ವದ ಇತರೆಲ್ಲ ದೇಶಗಳ ದೇಶೀಯ, ಪ್ರಾದೇಶಿಕ ಭಾಷೆಗಳಲ್ಲಿ ಜನತೆಗೆ ಸುಲಭವಾಗಿ ವೇದ್ಯವಾಗುವಂತೆ ದೊರೆಯಬೇಕಾಗುತ್ತದೆ. ಆಗಲೇ ಆ ಎಲ್ಲ ವಿಷಯಗಳನ್ನು ಸಾಮಾನ್ಯ ಜನತೆಗೆ, ಅನುವಾದಕರಿಗೆ ತಿಳಿಸಿ ಹೇಳಲು, ಭಾಷಾಂತರಿಸಲು ಸುಲಭವಾಗುತ್ತದೆ.

ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆ ಕೈಗೊಂಡಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಕೃಷಿ ವಿಜ್ಞಾನದ ವಿವಿಧ ಶಾಸ್ತ್ರ ವಿಭಾಗಗಳಲ್ಲೂ ಪಾರಿಭಾಷಿಕ ಶಬ್ದಕೋಶ ರಚಿಸಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದು, ಆ ದಿಸೆಯಲ್ಲಿ ಇದೊಂದು ಯತ್ನವಾಗಿದೆ.

ಪಾರಿಭಾಷಿಕ ಶಬ್ದಗಳ ರಚನೆಯಲ್ಲಿ ಕೆಲವು ಉಪಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಅವುಗಳಲ್ಲಿ ಕೆಳಗಿನವು ಮುಖ್ಯವಾಗಿವೆ :

1. ಈಗಾಗಲೇ ಬಳಕೆಯಲ್ಲಿರುವ ಇಂಗ್ಲಿಷ್‌ನಲ್ಲಿಯ ಪದಗಳನ್ನು ಇದ್ದಕ್ಕಿದ್ದಂತೆ ಕನ್ನಡದಲ್ಲಿ ಬಳಸಿಕೊಳ್ಳುವುದು.

   ಇದು ಅವಶ್ಯಕವಷ್ಟೇ ಅಲ್ಲ, ವ್ಯಾವಹಾರಿಕವೂ ಹೌದು. ಒಂದು ರೀತಿಯಲ್ಲಿ ಇವು ಇಂಗ್ಲಿಷ್ ಶಬ್ದಗಳಷ್ಟೇ ಅಲ್ಲ, ಅಂತರರಾಷ್ಟ್ರೀಯ ವಿಜ್ಞಾನ ಶಬ್ದಗಳು. ವಿವಿಧ ಭಾಷೆಗಳಿಂದ ಬಂದು ಇಂಗ್ಲಿಷ್ ಭಾಷೆಯಲ್ಲಿ ಸೇರಿಕೊಂಡಿವೆ. ಹಾಗೆ ಮಾಡುವುದರಿಂದ ನಮ್ಮ ವೈಜ್ಞಾನಿಕ ಶಬ್ದ ಸಂಪತ್ತು ಬೆಳೆಯುತ್ತದೆ.

2. ಬಹುತೇಕ ತಾಂತ್ರಿಕ ಶಬ್ದಗಳಿಗೆ ಸಂಸ್ಕೃತ ಶಬ್ದಗಳನ್ನು ಬಳಸುವುದು. ಸಂಸ್ಕೃತ ಅನೇಕ ಭಾರತೀಯ ಭಾಷೆಗಳಿಗೆ ಮಾತೃಸ್ಥಾನದಲ್ಲಿದೆ. ಅನೇಕ ಭಾರತೀಯ ಭಾಷೆಗಳವರು ಸಂಸ್ಕೃತ ಶಬ್ದಗಳನ್ನೇ ಹೆಚ್ಚಾಗಿ ಬಳಸಿಕೊಂಡಿದ್ದಾರೆ. ನಮ್ಮ ನುಡಿಯ ಮೂಲ ಸಂಸ್ಕೃತವಾಗಿರದಿದ್ದರೂ ಅದು ಸಾಕುತಾಯಿ. ಸಾಕುತಾಯಿಯ ಪ್ರಭಾವವೇ ಹೆಚ್ಚಿ ಕನ್ನಡ ಸಂಸ್ಕೃತಮಯವಾಗಿದೆ.

3. ಕನ್ನಡ ಶಬ್ದಗಳು ದೊರೆಯುತ್ತಿರುವಲ್ಲಿ ಅವುಗಳನ್ನು ತೆಗೆದುಕೊಳ್ಳುವುದು.

4. ಭಾರತ ಸರ್ಕಾರ ಸೂಚಿಸಿದ ಪದಗಳಲ್ಲಿ ಉಚಿತವಾದವುಗಳನ್ನು ಆಯ್ಕೆ ಮಾಡಿಕೊಳ್ಳುವುದು.

ಈಗಾಗಲೇ ಭಾರತ ಸರ್ಕಾರವು ಎಲ್ಲ ವಿಷಯಗಳ ತಾಂತ್ರಿಕ ಶಬ್ದಗಳಿಗೆ ಸಮಾನ ಪದಗಳನ್ನು ಹಿಂದಿಯಲ್ಲಿ ಗುರುತಿಸಿ, ಹಲವಾರು ಪಾರಿಭಾಷಿಕ ಶಬ್ದಕೋಶಗಳನ್ನು ಪ್ರಕಟಿಸಿದೆ.

ಈ ಪಾರಿಭಾಷಿಕ ಶಬ್ದಕೋಶ ರಚನೆಯಲ್ಲಿ ಮೇಲಿನ ನಾಲ್ಕೂ ಮಾರ್ಗದರ್ಶನ ಸೂತ್ರಗಳನ್ನು ಅನುಸರಿಸಲಾಗಿದೆ. ಮೊದಲನೆಯ ಸೂತ್ರದನ್ವಯ ಕೇವಲ ಲಿಪ್ಯಂತರವಿರುವುದರಿಂದ ಅಂಥ ಶಬ್ದಗಳು ಇದರಲ್ಲಿ ಸೇರಿಲ್ಲ.

ಬೇಸಾಯಶಾಸ್ತ್ರಕ್ಕೆ ಸಂಬಂಧಿಸಿದ ಸಕಲ ಶಬ್ದಗಳೂ ಇಲ್ಲಿ ಸಮಾವೇಶಗೊಂಡಿವೆ ಎಂದಲ್ಲ. ಸಾಧ್ಯವಾದಷ್ಟು ಸಾಮಾನ್ಯ ಬಳಕೆಯ ಶಬ್ದಗಳನ್ನು ಸೇರಿಸಲಾಗಿದೆ. ಇದರಲ್ಲಿ ಇತರ ಕೃಷಿ ಸಂಬಂಧಿ ಶಾಸ್ತ್ರಗಳಿಗೆ ಸಂಬಂಧಿಸಿದ ಅನೇಕ ಬಳಕೆಯ ಶಬ್ದಗಳು ಸಹಜವಾಗಿಯೇ ಸೇರ್ಪಡೆಯಾಗಿವೆ. ಏಕೆಂದರೆ, ವಿವಿಧ ಶಾಸ್ತ್ರಗಳಲ್ಲಿ ಬಳಕೆಯಾಗುವ ಕೆಲವು ಸಾಮಾನ್ಯ ಶಬ್ದಗಳ ನಡುವೆ 'ಇದಮಿತ್ಥಂ' ಎಂದು ಗೆರೆ ಎಳೆಯುವುದು ಸಾಧ್ಯವಾಗದ ಮಾತು.

ಈ ಪುಸ್ತಕವನ್ನು ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯ ತೃಣಧಾನ್ಯ ವಿಭಾಗದ ಪ್ರಾಧ್ಯಾಪಕರಾದ ಡಾ. ಕೆ. ಟಿ. ಕೃಷ್ಣೇಗೌಡ, ಕನ್ನಡ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ ಶ್ರೀಮತಿ ಸಿ. ಕೆ. ಕುಮುದಿನಿ ಮತ್ತು ಸಹಾಯಕ ಪ್ರಾಧ್ಯಾಪಕರಾದ ಡಾ॥ ಉಷಾಕಿರಣ್ ಅವರುಗಳನ್ನೊಳಗೊಂಡ ಸಮಿತಿಯು ತಾಂತ್ರಿಕವಾಗಿ ಪರಿಶೀಲಿಸಿದೆ. ವಿಭಾಗದ ಬೆರಳಚ್ಚುಗಾರರಾದ ಶ್ರೀ ಎಲ್. ಆರ್. ದೊಡ್ಡರಂಗಯ್ಯ ಅವರು ಸ್ವಚ್ಛಪ್ರತಿ ಸಿದ್ಧಪಡಿಸಿದ್ದು, ಕರಡೋದುವಿಕೆಯಲ್ಲಿ ವಿಭಾಗದ ಕರಡೋದುಗಾರರಾದ ಶ್ರೀ ಎಂ. ರಮೇಶ್ ಅವರು ಸಹಕರಿಸಿದ್ದಾರೆ.

ಈ ಶಬ್ದಕೋಶ ಬೇಸಾಯಶಾಸ್ತ್ರದ ವಿದ್ಯಾರ್ಥಿಗಳಿಗೂ ಗ್ರಂಥರಚನೆ ಮಾಡುವವರಿಗೂ ಅನುವಾದಕರಿಗೂ ಇತರ ಅಸಕ್ತರಿಗೂ ಉಪಯುಕ್ತವಾಗುವುದೆಂದು ಆಶಿಸಲಾಗಿದೆ.

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 024

**ಸಿ. ಕೆ. ಕುಮುದಿನಿ**
ವಿಭಾಗದ ಮುಖ್ಯಸ್ಥರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿಯ ಸಂಚಾಲಕರು

# ಬೇಸಾಯಶಾಸ್ತ್ರ
# ಪಾರಿಭಾಷಿಕ ಶಬ್ದಕೋಶ

# ಒಪ್ಪೋಲೆ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| 2 | 18 | ಉತ್ತರಾಣ | ಉತ್ತರಾಣಿ |
| 3 | 27 | candatus | caudatus |
| 7 | 4 | Amsactor | Amsactar |
| 15 | 33 | ಪುಷ್ಪಪತ | ಪುಷ್ಪ ಪತ್ರ |
| 17 | 4 | ಲಶುನ ಗೆಡ್ಡ | ಲಶುನ / ಗೆಡ್ಡೆ |
| 28 | 15 | curuma | curcuma |
| 32 | 30 | Lab-lab puspurcus | *Lab–lab puspurcus* |
| 34 | 26 | Ecologicalniche | Ecological niche |
| 42 | 19 | ಹಿಮಯುಕ್ತ | ಹಿಮಮುಕ್ತ |
| 45 | 2 | ಬೇರ್ಪಡಿಕೆ | ಬೇರ್ಪಡಿಕೆಕಾರಕ |
| 45 | 19 | s aggers | staggers |
| 48 | 14 | ಅಪ್ಸಣೆಬು | ಅಪ್ಸೆಣಬು |
| 48 | 30 | ಪರಿಕರಗಳ ತಾಂತ್ರಿಕತೆಗಳ ಬಳಕೆ | ಪರಿಕರಗಳ/ತಾಂತ್ರಿಕತೆಗಳ ಬಳಕೆ |
| 96 | 9 | ಮಂದ ಹಾಲು | ಮರದ ಹಾಲು |
| 105 | 8 | ಇಡೀಫಾರ್ಮ್ | ಇಡೀಫಾರ್ಮ್ ನಿರ್ವಹಣೆ ವಿಧಾನ |

# A

| | |
|---|---|
| Abatement | ಕಡಮೆಯಾಗುವಿಕೆ, ಉಡುಗುವಿಕೆ |
| Aberrant | ಅಪಸರಿತ |
| Aberration | ಅಪಸರಣ |
| Abiotic | ಅಜೈವಿಕ |
| Abiotic environment | ಅಜೈವಿಕ ಪರಿಸರ |
| Abnormal | ಅಸ್ವಾಭಾವಿಕ, ಅಸಾಮಾನ್ಯ |
| Abort | ಬಂಜೆ, ಗೊಡ್ಡು, ಕುರುಟು ಬೀಳು |
| Abrasive | ಘರ್ಷಕ |
| *Abrus precatorius* | ಗುಲಗಂಜಿ |
| Abscission | ಛೇದನ |
| Abscission layer | ಛೇದನ ಪದರ |
| Abscission of spikelet | ಕದಿರು ಹೂಗೊಂಚಲು ಛೇದನ |
| Absolute | ಅಪ್ಪಟ, ಪೂರ್ಣ, ಶುದ್ಧ |
| Absolute accuracy | ಪರಿಪೂರ್ಣ ನಿಷ್ಕೃಷ್ಟತೆ |
| Absolute growth rate | ನಿರಪೇಕ್ಷ ಬೆಳವಣಿಗೆ ವೇಗ |
| Absolute juice | ನಿರಾವಲಂಬ ರಸ, ನಿರಪೇಕ್ಷ ರಸ |
| Absolute water requirement | ನಿರಪೇಕ್ಷ ನೀರು ಅಗತ್ಯತೆ |
| Absorbance | ಹೀರುವ ಗುಣ |
| Absorbed water | ಹೀರಿಕೆಯಾದ ನೀರು |
| Absorbent | ಹೀರುಕ |
| Absorption | ಹೀರುವಿಕೆ |
| Absorption coefficient | ಹೀರಿಕೆ ಗುಣಕ |
| Absorption loss | ಹೀರಿಕೆ ನಷ್ಟ |
| Absorption radiation | ಹೀರಿಕೆ ವಿಕಿರಣ |
| A bullock work unit | ಒಂದು ಎತ್ತಿನ ಕಾರ್ಯಘಟಕ |
| *Acacia catechu* | ಕಗ್ಗಲಿ |
| Acaricide | ನುಶಿನಾಶಕ |
| Accelerated erosion | ವೇಗೋತ್ಕರ್ಷಗೊಳಿಸಿದ ಕೊಚ್ಚಣೆ |
| Accelerator | ವೇಗೋತ್ಕರ್ಷಕ |

| | |
|---|---|
| Accentuation | ವೃದ್ಧಿಗೊಳಿಸುವಿಕೆ, ತೀವ್ರಗೊಳಿಸುವಿಕೆ |
| Acceptability | ಸ್ವೀಕಾರಾರ್ಹತೆ, ಸ್ವೀಕಾರತೆ |
| Accessory cell | ಸಹಾಯಕ ಜೀವಕೋಶ, ಆನುಷಂಗಿಕ ಜೀವಕೋಶ |
| Accessory pigments | ಅಧಿಕ ವರ್ಣದ್ರವ್ಯಗಳು |
| Access road | ಪ್ರವೇಶ ಮಾರ್ಗ |
| Accidental error | ಆಕಸ್ಮಿಕ ದೋಷ |
| Acclimation | ಹವಾಮಾನ ಹೊಂದಿಕೆ |
| Acclimatization | ಹವಾಮಾನಕ್ಕೆ ಹೊಂದಿಕೊಳ್ಳುವಿಕೆ |
| Accretion | ಅಂಗವೃದ್ಧಿ |
| Accumulate | ಸಂಚಯಿಸು, ಸಂಗ್ರಹಿಸು |
| Accumulated or cumulative infiltration | ಸಂಚಯಿತ ಬಸಿಯುವಿಕೆ |
| Accuracy | ಯಥಾರ್ಥತೆ, ನಿಷ್ಕೃಷ್ಟತೆ, ಖಚಿತತೆ |
| Acentric | ಕೇಂದ್ರೀಯವಲ್ಲದ, ಕೇಂದ್ರರಹಿತ |
| Achene | ಹಣ್ಣಿನಂತೆ ತೋರುವ ಬೀಜ |
| *Achras sapota* | ಚಿಕ್ಕು, ಸಪೋಟ |
| *Achyranthes aspera* | ಉತ್ತರಾಣ |
| Acid anhydride | ಆಮ್ಲಅನಾರ್ದ್ರವಸ್ತು |
| Acid base catalysis | ಆಮ್ಲಪ್ರತ್ಯಾಮ್ಲ ವೇಗವರ್ಧನಕ್ರಿಯೆ |
| Acid base pair | ಆಮ್ಲಪ್ರತ್ಯಾಮ್ಲ ಜೋಡಿ |
| Acid base titration | ಆಮ್ಲಪ್ರತ್ಯಾಮ್ಲ ಪ್ರಮಾಣ ಮಾಪನ |
| Acid electrolyte | ಆಮ್ಲವಿದ್ಯುದ್ವಿಶ್ಲೇಷ್ಯ |
| Acidfast bacteria | ಆಮ್ಲಸ್ಥಾಯಿ ಬ್ಯಾಕ್ಟೀರಿಯಾ |
| Acid fermentation | ಆಮ್ಲ ಹುದುಗುವಿಕೆ |
| Acid forming fertilizer | ಆಮ್ಲೋತ್ಪಾದಕ ರಸಗೊಬ್ಬರ |
| Acid humus | ಆಮ್ಲ ಹ್ಯೂಮಸ್ |
| Acidifying | ಆಮ್ಲೀಕರಿಸುವ |
| Acidimeter | ಆಮ್ಲಮಾಪಕ |
| Acid mine drainage | ಆಮ್ಲಗಣಿ ಬಸಿಯುವಿಕೆ |
| Acidophiles | ಆಮ್ಲ ಮಣ್ಣಿನಲ್ಲಿ ಬೆಳೆಯುವ ಕಳೆಗಳು |
| Acid plant | ಆಮ್ಲಸ್ಥಾವರ |
| Acid scarification | ಆಮ್ಲ ಕರೆಮಾಡುವಿಕೆ |

| | |
|---|---|
| Acid soil | ಆಮ್ಲ ಮಣ್ಣು |
| Acidic | ಆಮ್ಲೀಯ |
| Acidity | ಆಮ್ಲೀಯತೆ |
| Acorn moth | ಓಕ್‌ಮರದ ಪತಂಗ |
| *Acorus calamus* | ಬಜೆ |
| Acre | ಎಕರೆ |
| Acre inch | ಎಕರೆ-ಅಂಗುಲ |
| Acre inch of water | ಎಕರೆ-ಅಂಗುಲ ನೀರು |
| Acropetal | ಊರ್ಧ್ವವರ್ಧಿ |
| Actinomorphic | ತ್ರಿಜ್ಯಸಮಮಿತಿ |
| Action potential | ಕ್ರಿಯಾ ಸಾಮರ್ಥ್ಯ |
| Action spectrum | ಕ್ರಿಯಾವರ್ಣ ಪಟಲ |
| Activated carbon | ಕ್ರಿಯಾಶೀಲ ಇದ್ದಿಲು |
| Activated sludge | ಕ್ರಿಯಾಶೀಲ ರೊಜ್ಜು |
| Activation | ಪ್ರಚೋದನೆ |
| Active ingredient | ಕ್ರಿಯಾಪೂರ್ಣ ಮೂಲಾಂಶ, ಕ್ರಿಯಾಪೂರ್ಣ ಘಟಕ |
| Acute | ತೀವ್ರ |
| Acute and chronic | ತೀವ್ರ ಮತ್ತು ದೀರ್ಘಾವಧಿಕ |
| Acute deficiency | ತೀವ್ರಕೊರತೆ |
| Adaptability | ಹೊಂದಾಣಿಕೆ |
| Adaptation | ಅನುಸರಣೆ, ಅಳವಡಿಕೆ |
| Adaptive radiation | ಸಂಯೋಜಿತ ವಿಕಿರಣ |
| Additive silage | ಹೆಚ್ಚುವರಿ ರಸಮೇವು |
| Adduct | ಅಭಿಕರ್ಷಣ, ಅಭಿಕರ್ಷಿಸು |
| Adiabatic | ಸ್ಥಿರೋಷ್ಣ |
| *Adiantum candatus* | ಗಜಕರ್ಣ |
| Adnate | ಅಂಟಿಕೊಂಡು ಬೆಳೆಯುವ |
| Adopt | ಅನುಸರಿಸು |
| Adoption behaviour | ಅನುಸರಣ ವರ್ತನೆ |
| Adsali sugarcane | 18 ತಿಂಗಳಲ್ಲಿ ಕಟಾವಿಗೆ ಬರುವ ಕಬ್ಬು |
| Adsorption | ಮೇಲ್ಮೈ ಮಂದಗಟ್ಟುವಿಕೆ |
| Adult | ಪ್ರೌಢ, ವಯಸ್ಕ |

| | |
|---|---|
| Adulticide | ಪ್ರೌಢಜೀವಿನಾಶಕ |
| Advance curve (irrigation) | ನೀರು ಹರಿವು ವಕ್ರರೇಖೆ (ನೀರಾವರಿ) |
| Adventitious root | ಆಗಂತುಕ ಬೇರು, ಆಕಸ್ಮಿಕ ಬೇರು |
| Adverse condition | ವ್ಯತಿರಿಕ್ತ ಸ್ಥಿತಿ |
| *Aegle marmelos* | ಬಿಲ್ವಪತ್ರೆ |
| Aeolian or loess (wind) deposit | ಬೀಸುಗಾಳಿ ಶೇಖರಿಸಿದ ಮಣ್ಣು |
| Aerate | ಗಾಳಿಯಾಡು |
| Aeration | ಮಣ್ಣಿನಲ್ಲಿ ಹವೆಯಾಡುವಿಕೆ |
| Aeration porosity | ಮಣ್ಣಿನಲ್ಲಿ ಹವೆ ತುಂಬಿದ ಕುಹರಗಳು |
| Aeration (storage) | ದಾಸ್ತಾನಿನಲ್ಲಿ ಕಾಳುಗಳಲ್ಲಿರುವ ಹವೆ ವಿನಿಮಯ |
| Aerial root | ಭೂಮಟ್ಟದ ಮೇಲೆ ಕಾಣಿಸಿಕೊಳ್ಳುವ ಆಕಾಶಿಬೇರು |
| Aerial spraying | ಗಾಳಿಮೂಲಕ ಸಿಂಪಡಿಸುವಿಕೆ |
| Aerobic | ಆಮ್ಲಜನಕಾಪೇಕ್ಷಿ |
| Aerobiosis | ಆಮ್ಲಜನಕೀಯ ಜೀವನ |
| Aerosol | ಆವಿ ಕೀಟನಾಶಕ |
| Aestivation | ಪುಷ್ಪದಳ ಜೋಡಣೆ |
| Affinity | ಆಕರ್ಷಣೆ, ಸೆಳೆತ |
| Afforestation | ಕಾಡು ಬೆಳೆಸುವಿಕೆ |
| After cultivation | ಮೊಳಕೆ ಬಂದ ನಂತರದ ಕಾರ್ಯಾಚರಣೆ (ಕುಂಟೆ ಉಳುಮೆ ಮತ್ತಿತರ ಸಾಗುವಳಿ ಕಾರ್ಯಾಚರಣೆಗಳು) |
| Aftermath | ದ್ವಿತೀಯ ಹುಲ್ಲುಗಾವಲು ಸಸ್ಯ |
| After ripening | ಮಾಗಿದನಂತರ |
| Agamy | ಅಯುಗ್ಮತೆ |
| *Agaricus campestris* | ಅಣಬೆ |
| *Agave americana* | ರಕ್ಕಸದಾಳಿ, ಆನೆಕತ್ತಾಳೆ, ಭೂತಾಳೆ |
| Agent | ನಿಯೋಗಿ |
| Agglomerate soil | ಮುದ್ದೆಗಟ್ಟಿದ ಮಣ್ಣು |
| Aggregate | ಮಣ್ಣು ಸಮಷ್ಟಿ |
| Agitator | ಮಣ್ಣು ಸಮಷ್ಟಿ ಕಲಕುಸಾಧನ |
| Agrarian | ಭೂವ್ಯವಸಾಯ ಸಂಬಂಧಿತ |
| Agricultural drought | ಕೃಷಿ ಬರ |
| Agricultural produce | ಕೃಷಿ ಉತ್ಪನ್ನ |

| | |
|---|---|
| Agriculture | ಕೃಷಿ, ಬೇಸಾಯ, ವ್ಯವಸಾಯ |
| Agrobiology | ಕೃಷಿ-ಜೀವಶಾಸ್ತ್ರ |
| Agroecology | ಕೃಷಿ ಪರಿಸರಶಾಸ್ತ್ರ |
| Agroclimatic regions | ಕೃಷಿ ಹವಾಮಾನ ವಲಯಗಳು |
| Agroclimatology | ಕೃಷಿ ಹವಾಮಾನಶಾಸ್ತ್ರ |
| Agro-industry | ಕೃಷಿ- ಉದ್ಯಮ |
| Agrology | ಕೃಷಿ ಶಾಸ್ತ್ರ |
| Agrometstation | ಕೃಷಿ ಹವಾಮಾನಸೂಚಿ ಕೇಂದ್ರ |
| Agronomy | ಬೇಸಾಯಶಾಸ್ತ್ರ |
| Agromyzid fly | ಅಗ್ರೊಮೈಜಿಡ್ ನೊಣ |
| Agro-silvi-pastoral system | ಕೃಷಿ ಅರಣ್ಯ ಹುಲ್ಲುಗಾವಲು ಪದ್ಧತಿ |
| Agrotechnical | ಕೃಷಿ ತಾಂತ್ರಿಕ, ಬೇಸಾಯ ತಾಂತ್ರಿಕ |
| A-horizon | ಎ-ವಲಯ |
| Airborne disease | ಗಾಳಿಸಾಗಿತ ರೋಗ |
| Air capacity of soil | ಕ್ಷೇತ್ರ ಸಾಮರ್ಥ್ಯದಲ್ಲಿ ಮಣ್ಣಿನಲ್ಲಿರುವ ಹವೆಯ ಪ್ರಮಾಣ |
| Air channel | ಗಾಳಿ ಕೊಳವೆ |
| Air-curing | ಗಾಳಿ/ವಾಯು ಸಂಸ್ಕರಣೆ |
| Air current | ಗಾಳಿ/ಹರಿವು/ಸೆಳೆತ |
| Air meter | ವಾಯುಮಾಪಕ |
| Air picnometer | ಗಾಳಿತುಂಬಿದ ಮಣ್ಣಿನ ಗಾತ್ರಮಾಪಕ |
| Air plants | ವಾಯುವೀಯ ಸಸ್ಯಗಳು |
| Air space | ವಾಯುಪ್ರದೇಶ |
| Akhiochi soils | ಅಖಿಯೋಕೈಮಣ್ಣುಗಳು(ಪ್ರವಾಹಿತ ಮಣ್ಣುಗಳು) |
| Albuminous | ಲೋಳೆಯುಕ್ತ |
| Alcohol | ಮದ್ಯಸಾರ |
| Alder fly | ಆಲ್ಡರ್ ನೊಣ |
| Aleurodis | ಬಿಳಿ ನೊಣ |
| Aleurone layer | ಅಲ್ಯೂರೋನ್ ಪ್ರೊಟೀನ್ ಪದರ |
| Alfalfa | ಕುದುರೆಮಸಾಲೆ ಸೊಪ್ಪು, ಕುದುರೆಮೆಂತೆ |
| Alfalfa weevil | ಕುದುರೆಮಸಾಲೆ ಮೂತಿಹುಳು |
| Alfisols | ಬೂದುಗಂದು ಮೇಲ್ಮೈವಲಯ ಮಣ್ಣುಗಳು |

| | |
|---|---|
| Algae | ಶೈವಲ |
| Algicide | ಪಾಚಿನಾಶಕ |
| Alkaline | ಕ್ಷಾರೀಯ |
| Alkaline soil | ಕ್ಷಾರ ಮಣ್ಣು (7.0 ಗಿಂತ ಅಧಿಕ pH (ಕ್ಷಾರ) ಮಣ್ಣು) |
| Alkaloidal reagent | ಸಸ್ಯಕ್ಷಾರ ಪ್ರತಿಕ್ರಿಯಾಕಾರಕ |
| Alleviation | ಉಪಶಮನ, ಕಡಮೆ ಮಾಡುವಿಕೆ |
| Alley farming | ಅನ್ಯೋನ್ಯ ಬೇಸಾಯ |
| *Allium cepa* | ಈರುಳ್ಳಿ |
| *Allium sativum* (Garlic) | ಬೆಳ್ಳುಳ್ಳಿ |
| Alluvial plain | ಮೆಕ್ಕಲು ಮೈದಾನ |
| Alluvial soil | ಮೆಕ್ಕಲು ಮಣ್ಣು |
| Almond moth | ಬಾದಾಮಿ ಪತಂಗ |
| *Alstonia scholaris* | ಹಾಲೆ ಮರ, ಎಳೆಬಾಳೆ |
| Alternate drying & wetting | ಪರ್ಯಾಯ ಒಣಗಿಸುವಿಕೆ ಮತ್ತು ನೀರುಣಿಸುವಿಕೆ |
| Alternate grazing | ಪರ್ಯಾಯ ಮೇಯಿಸುವಿಕೆ |
| Alternate host | ಪರ್ಯಾಯ ಆಸರೆ, ಪರ್ಯಾಯ ಆತಿಥೇಯ |
| Alternate leaf primordia | ಪರ್ಯಾಯ ಎಲೆ ಮೊಳಕೆ/ಅಂಕುರ |
| Alternate phyllotaxy | ಪರ್ಯಾಯ ಎಲೆಜೋಡಣೆ |
| Alternation of generation | ಪರ್ಯಾಯ ಪೀಳಿಗೆ, ಪರ್ಯಾಯ ಸಂತತಿ ಕ್ರಮ |
| Altitude | ಎತ್ತರ |
| Aluminium toxicity | ಅಲ್ಯೂಮಿನಿಯಂ ವಿಷಮತೆ |
| Aman rice | ಅಮಾನ್ ಬತ್ತ |
| *Amaranthus blitum* | ಕಿರಗಸಾಲೆ |
| Ambrosia beetle | ಅಂಬ್ರೋಷಿಯ ದುಂಬಿ, ಅಮೃತಕೀಟ |
| Ameliorants | ಮಣ್ಣು-ಸಸ್ಯ ಸುಧಾರಕಗಳು |
| Ameliorate | ಉತ್ತಮಗೊಳಿಸು |
| Amelioration | ಕೃಷಿ ಭೂ ಮೌಲ್ಯ ಉನ್ನತೀಕರಣ |
| Amendments | ಮಣ್ಣು ಭೂಗುಣ ಸುಧಾರಕಗಳು (ಭೌತಿಕ-ರಾಸಾಯನಿಕ) |
| Ametabola | ರೂಪಾಂತರವಿಲ್ಲದ ಕೀಟಗಳು |
| Ammonium fixation | ಅಮೋನಿಯಂ ಸ್ಥಿರೀಕರಣ (ಮಣ್ಣಿನಲ್ಲಿ) |

| | |
|---|---|
| *Amorphophallus campanulatus* | ಸುವರ್ಣಗೆಡ್ಡೆ |
| *Ampeloeissus tomentosa* | ಕಾಡು ದ್ರಾಕ್ಷಿ |
| *Amsactor albistriga* | ಕೆಂಪುತಲೆ ಕಂಬಳಿ ಹುಳು |
| Anaerobic organism | ಆಮ್ಲಜನಕ ನಿರಪೇಕ್ಷಿಜೀವಿ |
| Analgesic | ನೋವಳಿಕ, ನೋವು ಪರಿಹಾರಕ |
| Analogous | ಸದೃಶ |
| Analysis | ವಿಶ್ಲೇಷಣೆ |
| Anamorphous | ಅಸಾಧಾರಣ ರೂಪಾಂತರ |
| *Anamirta cocculus* | ಕಾಕಮಾರಿ, ಕಾಕಿಸೊಪ್ಪುಗೆಡ್ಡೆ |
| Anaphase | ಪಶ್ಚಾವಸ್ಥೆ |
| Anatomy | ಅಂಗರಚನಾಶಾಸ್ತ್ರ, ದೇಹರಚನಾಶಾಸ್ತ್ರ |
| Androecium | ಪುಂಕೇಸರ |
| Angiosperm | ಆವೃತಬೀಜ |
| Angoumois grain moth | ಬತ್ತದ ಊಜಿನೊಣ |
| Angular | ಕೋನಾಕಾರದ |
| Animal production | ಪ್ರಾಣಿ ಉತ್ಪನ್ನ |
| Animal refuse | ಪ್ರಾಣಿವರ್ಜಿತ |
| Animal stock | ಜಾನುವಾರು ಮಂದೆ |
| Animal unit | ಪ್ರಾಣಿ ಘಟಕ |
| Anion | ಋಣಅಯಾನ್, ಋಣವಿದ್ಯುತ್ವಾಹೀಕಣ |
| Anise | ಕಾಡು ಓಮ |
| Anisogamete | ಅಸಮಯುಗ್ಮಕ |
| *Annona squamosa* | ಸೀತಾಫಲ |
| Annual | ವಾರ್ಷಿಕ |
| Annulated root | ಉಂಗುರದಂತಹ ಉಬ್ಬುಗಳುಳ್ಳ ಬೇರು |
| *Anomis flava* | ಕೊಂಡಲಿ ಹುಳು |
| Antagonism | ಪ್ರತಿಷೇಧಕತೆ, ವಿರೋಧಕತೆ |
| Antenna | ಕುಡಿಮೀಸೆ |
| Anther | ಪರಾಗಕೋಶ |
| *Antherea assama* | ಮೂಗ ರೇಷ್ಮೆ ಹುಳು |
| *Antherea palpsa* | ಟಸಾರ್ ರೇಷ್ಮೆಹುಳು |

| | |
|---|---|
| Anthesis | ಪರಾಗ ಬಿರಿಯುವ ಸಮಯ, ಅರಳುವ ಕಾಲ, ಹೂವರಳಿ ಕಾಯಾಗುವ ಹಂತ |
| *Anthocephalus cadamba* | ಕಡಹದ ಮರ, ಕಡವಾಳ |
| Anthrax, Anthracnose | ನೆರಡಿರೋಗ |
| Antibiosis | ಪ್ರತಿಜೈವಿಕತೆ, ಪ್ರತಿಜೀವಿ ಉತ್ಪಾದಕತೆ |
| Antibiotic | ಪ್ರತಿಜೈವಿಕ |
| Anticoagulant | ಪ್ರತಿ ಹೆಪ್ಪುಕಾರಕ |
| Anti-friction | ಪ್ರತಿ ಘರ್ಷಕ |
| Antitranspiration | ಪ್ರತಿ ಬಾಷ್ಪವಿಸರ್ಜನೆ |
| Aphid, Aphis | ಹೇನು |
| *Aphis craccivora* | ಅವರೆ ಹೇನು |
| Apical dominance | ಶೀರ್ಷ ಪ್ರಧಾನ |
| Apocarpous pistil | ವಿಭಜಿತ ಸ್ತ್ರೀಕೇಸರಾಂಗ |
| Appendage | ಅನುಬಂಧ |
| Apple hawk moth | ಸೇಬಿನ ಹಾಕ್ ಪತಂಗ |
| Apple leaf roller | ಸೇಬು ಎಲೆ ಸುರುಳಿಕಾರಕ |
| Application | 1) ಅನ್ವಯ, 2) ಹಾಕುವಿಕೆ |
| Applied botany | ಅನ್ವಿಕ ಸಸ್ಯಶಾಸ್ತ್ರ |
| Applied control | ಅನ್ವಯಿತ ಹತೋಟಿ |
| Appropriate technology | ಸೂಕ್ತ ತಾಂತ್ರಿಕತೆ |
| Aquaculture | ಜಲಕೃಷಿ |
| Aquatic insect | ಜಲಚರಕೀಟ |
| Aquatic plant | ಜಲೀಯ ಸಸ್ಯ |
| Aquatic root | ಜಲಬೇರು |
| Aquatic weed | ಜಲೀಯ ಕಳೆ |
| Aqueous | ಜಲಮಯ |
| Aquifer | ಭೂಅಂತರ್ಗತ ಜಲಶೇಖರಾಗಾರ, ಜಲಾವೃತ |
| Aquiferous | ಜಲದಾಯಕ |
| Arable crop | ವ್ಯವಸಾಯ ಯೋಗ್ಯ ಬೆಳೆ |
| Arable farming | ಸಾಗುವಳಿ ಭೂಮಿ |
| Arable land | ವ್ಯವಸಾಯ ಯೋಗ್ಯ ಭೂಮಿ, ಸಾಗುವಳಿ ಯೋಗ್ಯಭೂಮಿ |
| *Arachis hypogea* | ಸೇಂಗ, ನೆಲಗಡಲೆ |

| | |
|---|---|
| Arboriculture | ವೃಕ್ಷಕೃಷಿ |
| Arc | ಕಂಸ |
| *Areca catechu* | ಅಡಿಕೆ |
| Areole | ನೆರೆದಿಂಡುಗಳ ನಡುವಣ ಪ್ರದೇಶ |
| *Argemone mexicana* (Dattura) | ದತ್ತೂರ |
| Arid | ಕಡಮೆ ಮಳೆ ಪ್ರಮಾಣದ, ಶುಷ್ಕ |
| Arid climate | ಶುಷ್ಕ ಹವಾಮಾನ |
| Aridity | ಶುಷ್ಕತೆ |
| Arid land | ಶುಷ್ಕ ಜಮೀನು |
| Arid region | ಒಣ ಪ್ರದೇಶ |
| Arisfate | ಊಬುರೂಪ |
| *Aristolochia indica* | ಈಶ್ವರಿ ಗಿಡ, ಈಶ್ವರಿ ಬೇರು |
| Army worm | ಸೇನೆಹುಳು |
| Aroma | ಪರಿಮಳ, ಸುಗಂಧ |
| Aromatic plants | ಸುಗಂಧದ್ರವ್ಯ ಸಸ್ಯಗಳು |
| Arsenical | ಶಂಖಪಾಷಾಣ |
| Artificial fertilizer | ಕೃತಕ ರಸಗೊಬ್ಬರ |
| *Artocarpus heterophyllus* | ಹಲಸು |
| Arviculture | ಬೆಳೆ ವಿಜ್ಞಾನ ಶಾಸ್ತ್ರ |
| Asexual | ಅಲೈಂಗಿಕ |
| Ash | ಬೂದಿ |
| Ash gourd | ಬೂದುಗುಂಬಳ |
| Asparagus | ಆಸ್ಪರಾಗಸ್ ತರಕಾರಿ |
| *Asparagus racemosus* | ಶತಮೂಲಿ |
| Aspermous | ಬೀಜರಹಿತತೆ, ಬೀಜಶೂನ್ಯತೆ |
| Aspirator | ವಾಯುಚೋಷಕ ಸಾಧನ |
| Aspiration | ವಾಯುಸೆಳೆತ |
| Assimilation | ಜೀರ್ಣಮಾಡುವಿಕೆ |
| Assimilatory root | ಹೀರಿಕೆ ಬೇರು |
| Astringent variety | ಕಠಿಣ ತಳಿ, ಬಿರುಸಾದ ತಳಿ |
| Asymmetrical flower | ಅಸಮರೂಪಿ ಪುಷ್ಪ |
| Atmosphere | ವಾತಾವರಣ |

| | |
|---|---|
| Atmospheric pressure | ವಾತಾವರಣ ಒತ್ತಡ |
| Atomizer sprayer | ತುಂತುರು ಯಂತ್ರ, ಸಿಂಪರಕ |
| Attitude | ಪ್ರವೃತ್ತಿ |
| Auger (soil) | ನೆಲಬೈರಿಗೆ |
| Augmentation | ವೃದ್ಧೀಕರಣ |
| Augmentation cropping | ಇಳುವರಿ ಲಾಭ ವರ್ಧಕ ಬೇಸಾಯ |
| Australian lady bird beetle | ಆಸ್ಟ್ರೇಲಿಯಾದ ಹೆಣ್ಣು ದುಂಬಿ,<br>ಗುಲಗಂಜಿ ಹುಳು |
| Autocatalysis | ಸ್ವಯಂ ವೇಗೋತ್ಕರ್ಷಣೆ |
| Autoclave | ಒತ್ತಡ ಆವಿಗೆ, ಉಸಿರುಪಾತ್ರೆ |
| Autolysis | ಸ್ವಯಂಲಯನ, ಸ್ವಯಂಜೀರ್ಣತೆ |
| Auto-reseeding | ಸ್ವಯಂ ಪುನರ್‌ಬೀಜ ಬಿತ್ತನೆ |
| Autotroph | ಸ್ವಪೋಷಿ |
| Auto trophic | ಸ್ವಪೋಷಿ |
| Auxanometer | ಸಸ್ಯದ ಬೆಳವಣಿಗೆಯನ್ನು ಅಳೆಯುವ ಮಾಪಕ |
| Auxins | ಸಸ್ಯಪ್ರಚೋದಕಗಳು |
| Available moisture | ಲಭ್ಯ ತೇವಾಂಶ |
| Available nitrogen | ಲಭ್ಯ ಸಾರಜನಕ |
| Available nutrient | ಲಭ್ಯ ಪೋಷಕಾಂಶ |
| Available water | ಲಭ್ಯ ನೀರು/ಜಲ |
| Average composition | ಸರಾಸರಿ ಸಂಯೋಜನೆ |
| Average intake rate | ಮಣ್ಣಿನಲ್ಲಿ ನೀರು ಒಳಸೋಸಿಕೆ ದರ |
| Avicennia | ಉಪ್ಪುಂಜಿಗಿಡ |
| Awn | ಊಬು |
| Axial flow | ಅಕ್ಷಹರಿವು |
| Axillary bud | ಕಂಕುಳು ಮೊಗ್ಗು |
| Axle | ಚಕ್ರದಚ್ಚು |
| Axon | ಉದ್ದತಂತು |
| Azolla | ಅಜೋಲ ರಸಗೊಬ್ಬರ |

## B

| | |
|---|---|
| Bacterial stal | ಬ್ಯಾಕ್ಟೀರಿಯಾ ತೊಟ್ಟುಕೊಳೆರೋಗ |
| Back radiation | ಹಿಂವಿಕಿರಣ |
| Bad land | ಕಳಪೆ ಭೂಮಿ |
| Bagasse | ಕಬ್ಬಿನ ಸಿಪ್ಪೆ |
| Bait station | ಆಕರ್ಷಕ ಆಹಾರವನ್ನಿಡುವ ಸ್ಥಳ |
| Bajra | ಸಜ್ಜೆ |
| Balance | ಸಮತೋಲನ |
| Balanced fertilizer | ಸಂತುಲಿತ ರಸಗೊಬ್ಬರ |
| Balanced ration | ಸಮತೋಲಿತ ಮೇವು, ಪಡಿ ಮೇವು |
| Ball bearing | ಗುಂಡು ಹೊರಳು |
| Balloon fly | ಉಬ್ಬುನೊಣ |
| Band placement | ಪಟ್ಟಿಯಲ್ಲಿ ಹಾಕುವಿಕೆ |
| Band seeding | ಸಾಲುಬಿತ್ತನೆ, ಪಟ್ಟಿಬಿತ್ತನೆ |
| Banker | ಬಂಡವಾಳಗಾರ, ಬ್ಯಾಂಕರ್ |
| Barb | ಕೊಕ್ಕೆ ಮುಳ್ಳು |
| Bark beetle | ತೊಗಟೆ ದುಂಬಿ |
| Bark eating caterpillar | ತೊಗಟೆ ತಿನ್ನುವ ಕಂಬಳಿ ಹುಳು |
| Barn | ಕಣಜ |
| Barn yard | ಕಣ |
| Barnyard-millet | ಊದಲು, ಹಟ್ಟಕಿರುಧಾನ್ಯ |
| Barometer | ವಾತಾವರಣ ಒತ್ತಡ ಮಾಪಕ |
| Barrage | ಅಣೆಕಟ್ಟು |
| Barren land | ಬಂಜರು ಭೂಮಿ |
| Basal application | ಮೂಲಗೊಬ್ಬರ ಕೊಡುವಿಕೆ |
| Basaltic | ಪ್ರತ್ಯಾಮ್ಲೀಯ |
| Base | ಪ್ರತ್ಯಾಮ್ಲ |
| Base crops | ಮೂಲ/ಮುಖ್ಯಬೆಳೆಗಳು |
| Base period | ನೀರಾವರಿ ಅವಧಿ (ದಿನಗಳಲ್ಲಿ) |
| Basement membrane | ಆಧಾರ ಪೊರೆ |
| Basic | ಪ್ರತ್ಯಾಮ್ಲೀಯ |
| Basin irrigation | ಮಡಿ ನೀರಾವರಿ |

| | |
|---|---|
| Bast fibre | ಒಳತೊಗಟೆ ನಾರು |
| Bat fly | ಬಾವಲಿ ನೊಣ |
| *Bauhinia acuminata* | ಬಿಳಿಕಂಚುವಾಳ, ಬಿಳಿಮಂದಾರ |
| Beaded root | ಮಣಿಸರದಂತಹ ಬೇರು |
| Bearing tree | ಹಣ್ಣುಬಿಡುವ ಮರ |
| Bed | ಮಡಿ |
| Bed planting | ಮಡಿಗಳಲ್ಲಿ ನಾಟಿಮಾಡುವಿಕೆ |
| Bed rock | ತಳಬಂಡೆ |
| Beef production | ದನದ ಮಾಂಸೋತ್ಪಾದನೆ |
| Beetle | ಚಿಪ್ಪು ಕೀಟ, ಜೀರುಂಡೆ, ದುಂಬಿ |
| Begonia | ಆನೆಕಿವಿ ಹೂ |
| Bench-mark | ಸೂಚಿತ ಗುರುತು |
| Bench terracing | ಬೆಂಚ್ ಆಕಾರದ ಜಗತಿನಿರ್ಮಾಣ |
| Benefit cost ratio | ಲಾಭ-ವೆಚ್ಚ ಪ್ರಮಾಣ |
| Bengal-gram | ಕಡಲೆ ಕಾಳು |
| Bentonite | ಬೆಣಚುಕಲ್ಲು ಬಗೆಯ ವಸ್ತು |
| Bermuda grass (bahama grass) | ಗರಿಕೆ ಹುಲ್ಲು |
| Berry | ಬೆರ್ರಿಹಣ್ಣು |
| Berseem | ಬರ್ಸೀಂ |
| *Beta vulgaris* | ಬೀಟ್‌ರೂಟ್ |
| Betelnut (Arecanut) | ಅಡಿಕೆ |
| Betelvine bug | ವೀಳೆದೆಲೆ ಬಳ್ಳಿ ತಗಣೆ |
| B-horizon | ಬಿ-ವಲಯ |
| Biennial | ದ್ವೈವಾರ್ಷಿಕ |
| Bihar hairy caterpillar | ಕೋರಿಹುಳು, ಕಪ್ಪುತಲೆ ಕಂಬಳಿಹುಳು |
| Bilateral monopoly | ದ್ವಿಪಾರ್ಶ್ವಿಕ ಏಕಸ್ವಾಮ್ಯತೆ |
| Bilocule | ದ್ವಿಕುಹರ |
| Bimodal pattern | ದ್ವಿಮುಖ ಮಾದರಿ |
| Bin | ಕಣಜ, ತೊಟ್ಟಿ |
| Binder | ಬೆಳೆ ಕತ್ತರಿಸಿ ಕಂತೆಕಟ್ಟುವ ಯಂತ್ರ |
| Binding site | ಬಂಧಕ ಪ್ರದೇಶ |
| Binomial nomenclature | ದ್ವಿನಾಮಕರಣ ಪದ್ಧತಿ |

| | |
|---|---|
| Bioassay | ಜೈವಿಕ ಪರೀಕ್ಷೆ |
| Biochemical | ಜೀವರಸಾಯನಿಕ |
| Bioclimatics | ಜೈವಿಕ ಹವಾಮಾನ |
| Bioconversion | ಜೀವ ಸಂರಕ್ಷಣೆ |
| Bioenergy | ಜೈವಿಕ ಶಕ್ತಿ |
| Biofertilizer | ಜೈವಿಕ ಗೊಬ್ಬರ |
| Biogas | ಜೈವಿಕ ಅನಿಲ |
| Biogenetic | ಜೈವಿಕ ವಂಶವಾಹೀಯ |
| Biological activity | ಜೈವಿಕ ಚಟುವಟಿಕೆ |
| Biological control | ಜೈವಿಕ ಹತೋಟಿ |
| Biological determinants of cropping system | ಬೆಳೆಪದ್ಧತಿಯಲ್ಲಿ ಜೈವಿಕ ನಿರ್ಣಾಯಕಗಳು |
| Biological factor | ಜೈವಿಕ ಘಟಕ/ಅಂಶ |
| Biological insecticide | ಜೈವಿಕ ಕೀಟನಾಶಕ |
| Biological method | ಜೈವಿಕ ವಿಧಾನ |
| Biological weathering | ಜೈವಿಕ ಹವಾಮಾನ ಕ್ರಿಯೆ |
| Biological yield | ಜೈವಿಕ ವಸ್ತು ಒಣಪದಾರ್ಥದ ಇಳುವರಿ (ಒಂದು ಸಸ್ಯ ಇಲ್ಲವೇ ಒಂದು ಏಕಮಾನ ಪ್ರದೇಶದ ಬೆಳೆಯಲ್ಲಿ ಉತ್ಪತ್ತಿಯಾಗುವ ಒಟ್ಟು ಒಣ ಪದಾರ್ಥ) |
| Biology | ಜೀವಶಾಸ್ತ್ರ |
| Bioluminiscence | ಜೈವಿಕ ಬೆಳಕು ಸ್ಫುರಣ |
| Biolysis | ಜೈವಿಕಲಯನ, ಜೀವಲಯನ |
| Biolytic | ಜೀವಲಯಕಾರಕ |
| Biomass | ಜೈವಿಕರಾಶಿ |
| Biometer | ಜೈವಿಕ ಮಾಪಕ |
| Biometry | ಜೈವಿಕ ಗಣಿತ |
| Biomonitoring | ಜೈವಿಕ ಉಸ್ತುವಾರಿ |
| Biopedology | ಜೈವಿಕ ಮಣ್ಣುಶಾಸ್ತ್ರ |
| Biophysics | ಜೈವಿಕ ಭೌತಶಾಸ್ತ್ರ |
| Bioseries | ಜೈವಿಕ ಶ್ರೇಣಿ |
| Biosfactor | ಜೈವಿಕ ಘಟಕ |
| Biosphere | ಜೈವಿಕ ಗೋಳ, ಜೀವಾವರಣ |

| | |
|---|---|
| Biotechnology | ಜೀವ ತಾಂತ್ರಿಕತೆ |
| Biotic | ಜೀವಿಕ |
| Biotic adaptation | ಜೈವಿಕ ಹೊಂದಾಣಿಕೆ |
| Biotic factor | ಜೈವಿಕ ಘಟಕ/ಅಂಶ |
| Biotic potential | ಜೈವಿಕ ಸಾಮರ್ಥ್ಯ |
| Bird's eye spot | ಹಕ್ಕಿ ಕಣ್ಣಿನ ಚುಕ್ಕೆ |
| Bird rearer | ಹಕ್ಕಿ ಬೆದರು ಸಾಧನ ವ್ಯವಸ್ಥೆ |
| Bisexual | ದ್ವಿಲಿಂಗಿ |
| Bisexual flower | ದ್ವಿಲಿಂಗಿ ಪುಷ್ಪ |
| Bitter gourd | ಹಾಗಲ ಕಾಯಿ |
| Bivoltine | ದ್ವಿಸಂತತಿ |
| Black alkali | ಕಪ್ಪುಕ್ಷಾರ |
| Black band disease | ಕಪ್ಪುಪಟ್ಟೆರೋಗ |
| Black cotton soil | ಎರೆ ಭೂಮಿ, ಕಪ್ಪು ಭೂಮಿ |
| Black gram | ಉದ್ದಿನ ಬೇಳೆ |
| Black rot disease | ಕಪ್ಪುಕೊಳೆರೋಗ |
| Black scale | ಕಪ್ಪು ಶಲ್ಕ |
| Bladed harrow | ಹರಗು ಹಲುಬೆ |
| Blanching | ಬಿಳಿಚಿಕೊಳ್ಳುವಂತೆ ಮಾಡುವಿಕೆ, ದ್ರಾವಣ ಹರಳು |
| Blanket application | ಇಡೀ ಕ್ಷೇತ್ರದ ಮೇಲೆ ಸಿಂಪರಿಸುವಿಕೆ |
| Blast | ಬೆಂಕಿರೋಗ |
| Blastogenesis | ನನೆಕಣ ಉತ್ಪತ್ತಿ, ಮೊಳೆಕಣ ಬೆಳವಿಗೆ |
| Bleaching | ಚೆಲುವೆ ಮಾಡುವಿಕೆ, ಬಣ್ಣ ತೆಗೆಯುವಿಕೆ |
| Blend | ಬೆರಕೆ, ಮಿಳಿತವಾಗುವುದು |
| Blind cultivation | ಲಕ್ಷರಹಿತ ಕಳೆನಿವಾರಣ ಕಾರ್ಯಾಚರಣೆ (ಬಿತ್ತನೆ ಸಸಿ ಮೊಳಕೆಗೆ ಮುನ್ನ ಕೈಗೊಳ್ಳುವ ಕಳೆ ನಿರ್ಮೂಲನಯಂತ್ರ ಕಾರ್ಯಾಚರಣೆ) |
| Blister beetle | ಬೊಬ್ಬೆದುಂಬಿ |
| Blister mite | ಬೊಬ್ಬೆನುಸಿ |
| Blood meal | ರಕ್ತಾಹಾರ |
| Blossom thrips | ಪುಷ್ಪಮಂಜರಿ ಥ್ರಿಪ್ಸ್ (ಒಂದು ಬಗೆಯ ರಸಹೀರುವ ಕೀಟ) |

| | |
|---|---|
| Blotch | ಹೊಪ್ಪಳೆ |
| Blown-out land | ಗಾಳಿಕೊಚ್ಚಣೆಯಾದ ಭೂಮಿ |
| Blue green algae | ನೀಲಿ ಹಸುರುಶೈವಲ |
| Blue leaf beetle | ನೀಲಿ ಎಲೆದುಂಬಿ |
| Blue leaf hopper | ನೀಲಿ ಎಲೆ ಜಿಗಿಹುಳು |
| *Blumea lacera DC* | ಗಾಂಧಾರಿ ಗಿಡ, ಸಾಂಬ್ರಾಣಿ ಗಿಡ |
| Blue beetle | ನೀಲಿಚಿಪ್ಪಿನ ದುಂಬಿ |
| Bog soil | ಬಾಗ್ ಮಣ್ಣು |
| Boll worm. Pod borer | ಕಾಯಿ ಕೊರಕ |
| *Bombax malabaricum* | ಕೆಂಪುಬೂರುಗ, ಎಲವದ ಮರ, ಶಾಲ್ಮಲಿ |
| *Bombyx mori* | ಹಿಪ್ಪುನೇರಳೆ ರೇಷ್ಮೆಹುಳು |
| Bonded labour | ಜೀತದ ಆಳು |
| Bone manure | ಮೂಳೆಗೊಬ್ಬರ |
| Bone-meal | ಮೂಳೆಪುಡಿ ಆಹಾರ |
| Bonus crop | ಆರ್ಥಿಕ ಪ್ರಾಮುಖ್ಯತೆಯ ಅಂತರ್ ಮಿಶ್ರಬೆಳೆ |
| Boom sprayer | ಉತ್ಕರ್ಷ ಸಿಂಪರಕ |
| Boot stage | ಹೊಡೆಬರುವ ಮುಂಚಿನ ಸಸ್ಯದ ಬೆಳವಣಿಗೆ ಹಂತ |
| Borax | ಬೋರಾಕ್ಸ್‌ಲವಣ |
| Border | ಬದಿ, ದಂಡೆ, ದಿಂಡು |
| Border crop | ಅಂಚುಬೆಳೆ, ಬೇಲಿ/ಬದುಬೆಳೆ |
| Border irrigation | ಅಂಚು ನೀರಾವರಿ |
| Border row | ಅಂಚುಸಾಲು |
| Border strip | ಅಂಚುಪಟ್ಟಿ |
| Border strip irrigation | ಅಂಚುಪಟ್ಟಿ ನೀರಾವರಿ |
| Boro paddy (rice) | ಚಳಿಗಾಲದಲ್ಲಿ ನಾಟುವ ನೀರಾವರಿ ಬತ್ತ |
| Botanical pesticide | ಸಸ್ಯಮೂಲ ಪೀಡೆನಾಶಕ |
| Bottle-gourd | ಸೋರೆಕಾಯಿ |
| Boulder | ಒರಟುಕಲ್ಲು |
| Bouyoucos moisture meter | ಬಾಯುಕಸ್‌ನ ಆರ್ದ್ರತಾ ಮಾಪಕ |
| Brackish | ಸಮುದ್ರದ ಹಿನ್ನೀರು |
| Bract | ಪುಷ್ಪಪತ್ರ |

| | |
|---|---|
| **Bracteole** | ಉಪಪುಷ್ಪಪತ್ರ |
| **Bran** | ಹೊಟ್ಟು |
| **Brassica crops** | ಕೋಸಿನ ಬೆಳೆಗಳು |
| *Brassica juncea* | ಸಾಸುವೆ |
| *Brassica oleracea* | ಎಲೆಕೋಸು |
| **Bread fruit** | ದ್ವೀಪದ ಹಲಸು, ರೊಟ್ಟಿಹಣ್ಣು |
| **Breakthrough** | ತಿರುವು |
| **Breathing roots** | ಉಸಿರಾಡುವ ಬೇರುಗಳು |
| **Breeder's seed** | ತಳಿ ಅಭಿವೃದ್ಧಿ ಬೀಜ, ತಳಿಗಾರರ ಬೀಜ |
| **Bristled ears** | ಬಿರುಸಾದ ತೆನೆಗಳು |
| **Bristly hair** | ಬಿರುಗೂದಲು |
| **Brittle** | ಭಿದುರ |
| **Brix** | ಬ್ರಿಕ್ಸ್ ಸಕ್ಕರೆ ಪ್ರಮಾಣ |
| **Brix hydrometer** | ಬ್ರಿಕ್ಸ್‌ದ್ರವ ಮಾಪಕ |
| **Broad based terrace** | ವಿಶಾಲತಳದ ಜಗತಿ |
| **Broad bed & furrow** | ಅಗಲಮಡಿ-ಸಾಲು ಪದ್ಧತಿ(ವರ್ಟಿಸಾಲ್ ಮಣ್ಣಿನಲ್ಲಿಯ ಭೂನಿರ್ವಹಣ ಪದ್ಧತಿ) |
| **Broadcasting** | ಎರಚು ಭೇಸಾಯ (ಕೃಷಿ ಪರಿಕರಗಳನ್ನು ಜಮೀನಿನಲ್ಲಿ ಎರಚಿ ಹರಡುವಿಕೆ) |
| **Broad leaf** | ಅಗಲೆಲೆ (ದ್ವಿದಳ ಸಸ್ಯ ಎಲೆಗಳಂಥ, ಗರಿಯೇತರ ಸಸ್ಯಗಳು) |
| *Bromelia ananus* | ಅನಾನಸ್, ಪೈನಾಪಲ್ |
| **Brown hay** | ಚೆನ್ನಾಗಿ ಒಣಗಿಸಿದ ಹುಲ್ಲು |
| **Brown soils** | ಕಂದು ಮಣ್ಣುಗಳು |
| **Bruchus** | ದ್ವಿದಳ ಧಾನ್ಯದ ಕೀಟ |
| **Bruise** | ಜಜ್ಜುಗಾಯ |
| *Bryophyllum pinnatum* | ಕಾಡುಬಸಳೆ |
| **Bryophyte** | ಪರ್ಣಬೀಜ ಸಸ್ಯ |
| **Buck wheat** | ಬಕ್‌ವೀಟ್ |
| **Bud** | ಕಣ್ಣು, ಮೊಗ್ಗು (ಹೂ ಚಿಗುರು) |
| **Budding** | ಕಣ್ಣುಹಾಕುವಿಕೆ |
| **Budgrafting** | ಕಣ್ಣುಕಸಿ ಮಾಡುವಿಕೆ |
| **Buffer stock** | ಕಾಪುದಾಸ್ತಾನು |

| | |
|---|---|
| **Buffer strip cropping** | ಕಾಪುತಡೆ ಪಟ್ಟೆ ಬೆಳೆ ಬೆಳೆಯುವಿಕೆ |
| **Bulb** | ಕಂದ, ಗೆಡ್ಡೆ, ಲಶುನ |
| **Bulb crops** | ಲಶುನ ಗೆಡ್ಡ ಬೆಳೆಗಳು |
| **Bullock drawn** | ಎತ್ತು-ಚಾಲಿತ |
| **Bunchy top** | ಗೊಂಚಲು ರೀತಿಯ ತುದಿ |
| **Bund** | ಬದು, ಒಡ್ಡು |
| **Bund-former** | ಬದುಕಾರಕ |
| **Bunding** | ಬದುನಿರ್ಮಾಣ |
| **Bunga** | ಬಂಗರೋಗ |
| **Bunker silo** | ಹಗೇವು |
| **Bunt** | ಬಂಟ್‌ರೋಗ |
| **Burrowing activities** | ತೋಡುವ ಚಟುವಟಿಕೆಗಳು |
| **By-hot gas** | ಬಿಸಿ ಅನಿಲ ಕ್ರಮ |
| **By-pass canal** | ಉಪಕಾಲುವೆ |
| **By-product** | ಉಪ ಉತ್ಪನ್ನ |

## C

| | |
|---|---|
| **Caducous** | ಎಲೆ ಉದುರುವ |
| **Calamity** | ವಿಪತ್ತು |
| **Calcareous** | ಸುಣ್ಣಯುತ |
| **Calciphyte** | ಸುಣ್ಣಾಪೇಕ್ಷಿ ಸಸ್ಯ |
| **Calender of operations** | ಕೃಷಿ ಕಾರ್ಯಾಚರಣೆ ದಿನಚರಿ |
| **Calibration** | ಕ್ರಮಾಂಕ ನಿರ್ಣಯ |
| **Calyx** | ಪುಷ್ಪಪಾತ್ರೆ |
| **Cambium** | ವರ್ಧನ ಸ್ತರ |
| *Camellia sinensis* | ಟೀ ಎಲೆ, ಚಹಾಸೊಪ್ಪು |
| **Campanulate** | ಗಂಟೆಯಾಕಾರ |
| **Canal** | ಕಾಲುವೆ, ನಾಲೆ |
| **Canal irrigation** | ಕಾಲುವೆ-ನೀರಾವರಿ |
| *Canarium strictum* | ಜಾಲಿಬಂಕೆ, ಹಾಲಮಡ್ಡಿ |
| **Cane sugar** | ಸುಕ್ರೋಸ್ |
| *Cannabis sativa* | ಗಾಂಜ |

| | |
|---|---|
| **Canning** | ಡಬ್ಬೀಕರಣ |
| **Canopy** | ಶಿರೋಭಾಗ, ಮೇಲ್ಚಪ್ಪರ, ಮೇಲಿನ ಆವರಣ |
| **Canvas dam** | ಕ್ಯಾನ್‌ವಾಸ್ ನೀರು ನಿಯಂತ್ರಣ ತಡೆಸಾಧನ |
| **Canyon** | ಕಮರಿ, ಹಳ್ಳ, ಕಂದಕ |
| **Capacity factor** | ಸಾಮರ್ಥ್ಯಾಂಶ |
| **Capillary** | ಲೋಮನಾಳಯುತ |
| **Capillary conductivity** | ಲೋಮನಾಳ ಸಂವಾಹಕತೆ |
| **Capillary fringe** | ಜಲಮಟ್ಟದ ಮೇಲಿನ ಲಂಬಾಂತರ |
| **Capillary porosity** | ಲೋಮನಾಳ ಸಚ್ಛಿದ್ರತೆ |
| **Capillary water** | ಲೋಮನಾಳ ನೀರು |
| **Capital starved** | ಬಂಡವಾಳ ಕೊರತೆಯ |
| **Capsule** | ಪೊರೆಚೀಲ, ಬೀಜಕವಚ |
| **Carallia** | ಅಂದಿಪುನಾರು ಗಿಡ |
| *Carathamus tinctorius* | ಕುಸುಬೆ |
| **Carbohydrate** | ಶರ್ಕರಪಿಷ್ಟ |
| **Carbonation** | ಇಂಗಾಲೀಕರಣ |
| **Carbon cycle** | ಇಂಗಾಲವೃತ್ತ |
| **Carbon nitrogen ratio** | ಇಂಗಾಲ ಸಾರಜನಕ ಪ್ರಮಾಣ |
| **Carrier** | ಪೀಡೆನಾಶಕ ಸಂವಾಹಕ ವಸ್ತು |
| **Carry over soil moisture** | ಬೆಳೆ ಹಂಗಾಮು ನಡುವೆ ಇಲ್ಲವೇ ಬೆಳೆ ನಾಟಿಗೆ ಮೊದಲು ಬೆಳೆ ಬೇರು ವಲಯದಲ್ಲಿನ ಸಂಗ್ರಹಿತ ನೀರು (ಉಳಿಕೆ ಮಣ್ಣು ತೇವಾಂಶ) |
| **Caseworm** | ಗೂಡುಹುಳು |
| **Cash crops** | ಆರ್ಥಿಕ/ರೊಕ್ಕದ ಬೆಳೆಗಳು |
| **Cash tenent** | ನಗದು ಗುತ್ತಿಗೆದಾರ |
| *Cassytha filiformis* | ಆಕಾಶಬಳ್ಳಿ, ಮಂಗನುಡಿದಾರ |
| *Casuarina equisetifolia* | ಗಾಳಿಮರ, ಸರ್ವೆಮರ |
| **Catch crop** | ಅಂತರ್ವರ್ತಿ ಬೆಳೆ |
| **Catchment area** | ಜಲಗ್ರಾಹಿ ಕ್ಷೇತ್ರ/ಪ್ರದೇಶ |
| **Catena** | ಪಂಕ್ತಿ |
| **Caterpillar** | ಕಂಬಳಿಹುಳು |

| | |
|---|---|
| Cat-ion | ಧನವಿದ್ಯುದ್ವಾಹೀಕಣ, ಧನ ಅಯಾನು |
| Cattle | ದನಕರು |
| Cattle fodder | ದನಗಳ ಮೇವು |
| Cattle grid | ದನಗಳ ತಡೆಚೌಕಟ್ಟು |
| Cattle population | ಜಾನುವಾರು ಸಮಷ್ಟಿ |
| Cauliflower | ಹೂಕೋಸು |
| Cave cricket | ತೋಡು ಜೀರುಂಡೆ |
| Ceiling law | ನಿಯಂತ್ರಣ ಕಾಯ್ದೆ |
| Cell | ಕೋಶ |
| Cell plasma | ಕೋಶದ್ರವ್ಯ |
| Cemented soil | ಬಂಧಿತ ಮಣ್ಣು |
| Centre of origin | ಹುಟ್ಟಿದ/ಮೂಲದ/ಉಗಮ ಸ್ಥಾನ |
| Centrifugal | ಕೇಂದ್ರಾಪಗಾಮಿ |
| Cercospora spot | ಹುಚ್ಚೆಳ್ಳುರೋಗ |
| Cereal crop | ಧಾನ್ಯದ ಬೆಳೆ |
| Cereal cyst nematode | ಧಾನ್ಯ ಪೂತಿಕೋಶ ಜಂತು |
| Cereal forage | ಧಾನ್ಯದ ಮೇವು ಬೆಳೆ |
| Certified seed | ಪ್ರಮಾಣಿತ ಬೀಜ |
| Chaft | ಧಾನ್ಯಗಳ ಮೇಲಿನ ಹೊಟ್ಟು |
| Chaff-cutter | ಮೇವು ಕತ್ತರಿಸುವ ಯಂತ್ರ |
| Chaffiness | ಜೊಳ್ಳು |
| Chaffer beetle | ಚಾಫರ್ ದುಂಬಿ |
| Chaffy earhead | ಜಳ್ಳುತೆನೆ |
| Channel | ಕಾಲುವೆ |
| Characteristics | ಲಕ್ಷಣಗಳು |
| Chart | ರೇಖಾಪಟ |
| Chasmophyte | ಬಿರುಕುಭೇದ್ಯಸಸ್ಯ |
| Check basin irrigation | ತಡೆಮಡಿ ನೀರಾವರಿ |
| Check dam | ತಡೆಕಟ್ಟೆ |
| Check irrigation | ತಡೆ ನೀರಾವರಿ |
| Check row planting | ಸಮಾನಾಂತರ ಸಾಲು ಸಸ್ಯ ನಾಟಿ ಪ್ರಕ್ರಿಯೆ |
| Chelate | ಚೀಲೇಟು |

| | |
|---|---|
| Chemical | ರಾಸಾಯನಿಕ |
| Chemical control | ರಾಸಾಯನಿಕ ನಿಯಂತ್ರಣ |
| Chemical decomposition | ರಾಸಾಯನಿಕ ವಿಘಟನೆ |
| Chemical fallow | ಪಡಬಿಟ್ಟಭೂಮಿಯಲ್ಲಿ ರಾಸಾಯನಿಕ ಕಳೆ ಹತೋಟಿ |
| Chemical fertilizer | ರಾಸಾಯನಿಕ ಗೊಬ್ಬರ |
| Chemical properties | ರಾಸಾಯನಿಕ ಗುಣಧರ್ಮಗಳು |
| Chemical test | ರಾಸಾಯನಿಕ ಪರೀಕ್ಷೆ |
| Chemical weathering | ರಾಸಾಯನಿಕ ಶಿಥಿಲೀಕರಣ |
| Chemoreceptor | ರಾಸಾಯನಿಕ ಗ್ರಾಹಕ |
| Chernozem soil | ಚೆರ್ನೊಜೆಮ್ ಮಣ್ಣು |
| Chestnut soil | ಚೆಸ್ಟ್‌ನಟ್ ಮಣ್ಣು, ಕಡುಗಂದು ಮಣ್ಣು |
| Chick pea | ಚನ್ನ, ದಪ್ಪಕಡಲೆ, ಕಾಬೂಲಿ ಕಡಲೆ |
| Chilling injury | ಶೀತಗಾಯ |
| Chips | ಚೂರು, ಬಿಲ್ಲೆಗಳು |
| Chirke (mosaic streak) | ಮಚ್ಚೆಗೀರು ರೋಗ |
| Chisel | ಉಳಿ (ಉಳುಮೆ ಸಾಧನ) |
| Chiseling | ಉಳಿ ಉಳುಮೆ ವಿಧಾನ |
| Chlorophyll | ಸಸ್ಯ ಹರಿತ್‌ವರ್ಣಕ, ಪತ್ರಹರಿತ್ತು |
| Chlorosis | ಹರಿತ್ ಹೀನತೆ, ಹರಿತ್ ರೋಗ |
| C-horizon | ಸಿ-ವಲಯ |
| Chromosome | ವರ್ಣತಂತು |
| Chrysalis | ಪೊರೆಹುಳು |
| Chute | ಇಳಿಗಾಲುವೆ |
| *Cicer arietinum* | ಕಡಲೆ, ಚನ್ನ |
| Cinchona | ಕ್ವಿನೈನ್, ಜ್ವರಾಪಹಾರಿ ಔಷಧಿ |
| Citric acid cycle | ಸಿಟ್ರಿಕ್ ಆಮ್ಲವೃತ್ತ |
| *Citrus aurantium* | ಕಿತ್ತಳೆ, ಜಂಬೀರ |
| Citrus fruit | ನಿಂಬೆಜಾತಿಯ ಹಣ್ಣು |
| *Citrus vulgaris* | ಕಲ್ಲಂಗಡಿ |
| Class | ವರ್ಗ |
| Clay | ಎರೆಮಣ್ಣು, ಜೇಡಿ |
| Clay fraction | ಜೇಡಿಚೂರು |

| | |
|---|---|
| Clay mineral | ಜೇಡಿಖನಿಜ |
| Clay pan | ಜೇಡಿಪದರ |
| Cleavage | ಸೀಳು, ಒಡಕು |
| Cleistogamic flower | ಅರಳದ ಹೂ |
| Clean cultivation | ಶುದ್ಧ ಸಾಗುವಳಿ(ಮಧ್ಯಂತರ ಉಳುಮೆಯಿಂದ ಆಗಾಗ್ಗೆ ಕಳೆಕಸ ತೆಗೆದ) |
| Climate | ವಾಯುಗುಣ, ಹವಾಮಾನ |
| Climatic index | ಹವಾಮಾನ ಸೂಚಕ |
| Climatology | ಹವಾಮಾನಶಾಸ್ತ್ರ |
| Climber | ಹಬ್ಬುಬಳ್ಳಿ, ಅಡರುಬಳ್ಳಿ |
| Clinging root | ಹಿಡಿದುಕೊಂಡು ಹಬ್ಬುವ ಬೇರು, ಅಡರುಬೇರು |
| Clinical | ಚಿಕಿತ್ಸಾತ್ಮಕ |
| Clod | ಮಣ್ಣು ಹೆಂಟೆ |
| Clod crusher | ಹೆಂಟೆ ಒಡೆಯುವ ಯಂತ್ರ |
| Cloddy | ಹೆಪ್ಪಿನಂತಿರುವ, ಹೆಂಟೆಯಂತಿರುವ |
| Clogging | ಹೆಂಟೆಯಾಗುವುದು, ಹೆಪ್ಪಾಗುವುದು, ಮುದ್ದೆಯಾಗುವುದು |
| Clonal stock | ನಿರ್ಲಿಂಗಾಭಿವರ್ಧಿತ ಬೇರುಸಸಿ |
| Clone | ಕ್ಲೋನ್, ನಿರ್ಲಿಂಗಾಭಿವರ್ಧಿತ ಸಸ್ಯ |
| Club root | ಗದೆಯಾಕಾರದ ಬೇರು |
| Club shape | ಗದೆಯಾಕಾರ |
| Cluster bean | ಗೌರಿಕಾಯಿ, ಚವಳಿಕಾಯಿ |
| Coarse grains | ಒರಟುಧಾನ್ಯಗಳು |
| Coarse texture | ಒರಟು ಸ್ವರೂಪ |
| Coastal alluvium | ನದೀತೀರದ ಮೆಕ್ಕಲು |
| Coastal tracks | ತೀರ ಪ್ರದೇಶಗಳು |
| Coated fertilizers | ಲೇಪಿತ ರಸಗೊಬ್ಬರಗಳು |
| Coaxial | ಏಕಾಕ್ಷಕ |
| Cobworm | ತೆನೆಹುಳು |
| Cocoon | ರೇಷ್ಮೆಗೂಡು |
| Cockchaffer beetle | ಕಾಕ್‌ಚಾಫರ್ ದುಂಬಿ |
| Cocking | ಮೆದೆಹಾಕುವಿಕೆ |
| *Cocos nucifera* | ತೆಂಗು |

| | |
|---|---|
| *Codiacum veriegatium* | ಕ್ರೋಟನ್ |
| Co-efficient of variation | ವ್ಯತ್ಯಾಸದ ಗುಣಾಂಕ |
| *Coffea arabica* | ಕಾಫಿ |
| Cohesion | ಸಂಸಕ್ತತೆ |
| Cold hardiness | ಶೀತದಿಂದ ಗಡಸಾಗುವಿಕೆ |
| Cold store | ಶೀತಸಂಗ್ರಹ |
| Cold test | ಶೀತಲ ಪರೀಕ್ಷೆ (ಮೊಳಕೆ ಸಾಮರ್ಥ್ಯ ಕಂಡು ಹಿಡಿಯುವ ಪರೀಕ್ಷೆ) |
| Cold wave | ಶೀತಗಾಳಿ |
| Coleoptera | ಜೀರುಂಡೆ ವರ್ಗ, ಕೊಲಿಯಾಪ್ಟರ |
| Coleoptile | ಬೀಜಕಾಂಡ, ಮೂಲಕಾಂಡ |
| Collar | ಕೊರಳ ಭಾಗ |
| Collateral hosts | ಸಮಪಾರ್ಶ್ವ ಆತಿಥೇಯಗಳು |
| Collation | ಕ್ರಮಬದ್ಧ ಜೋಡಣೆ |
| Colloid | ಕಲಿಲಪದಾರ್ಥ |
| Colloidal behaviour | ಕಲಿಲ ವರ್ತನೆ |
| Colloidal clay | ಕಲಿಲ ಜೇಡಿ |
| Colocasia | ಕೆಸವು |
| Colorimeter | ಬಣ್ಣದ ತೀವ್ರತೆಯನ್ನಳೆಯುವ ಯಂತ್ರ, ವರ್ಣಮಾಪಕ |
| Colossal loss | ದೊಡ್ಡಪ್ರಮಾಣದ ನಷ್ಟ |
| Columnar | ಸ್ತಂಭಾಕಾರ |
| Combined tillage | ಸಂಯೋಜಿತ ಉಳುಮೆ |
| Combine harvester-thresher | ಬೆಳೆ ಕೊಯ್ಲೊಕ್ಕಣೆ ಚೊಕ್ಕಟಕಾರಿಯಂತ್ರ |
| Command area | ನೀರಾವರಿ ಅಚ್ಚುಕಟ್ಟುಪ್ರದೇಶ |
| Commensalism | ಆಶ್ರಯಜೀವನ, ಸಹಜೀವನ |
| Commercial cane sugar | ವಾಣಿಜ್ಯ ಸಕ್ಕರೆ |
| Commercial cash crop production | ವಾಣಿಜ್ಯೋದ್ದೇಶಿತ ರೊಕ್ಕದ ಬೆಳೆ ಉತ್ಪಾದನೆ |
| Commercialisation | ವಾಣಿಜ್ಯೀಕರಣ |
| Commodity | ಸರಕು |
| Common grazing land | ಸಾರ್ವಜನಿಕ (ಊರೊಟ್ಟಿನ) ಗೋಮಾಳ |

| | |
|---|---|
| Common vetch | ಕಾಮನ್ ವೆಚ್, ಕಳೆ |
| Community contact | ಸಮುದಾಯ ಸಂಪರ್ಕ |
| Community development worker | ಸಮುದಾಯ ವಿಕಾಸ ಕಾರ್ಯಕರ್ತ |
| Community facility | ಸಮುದಾಯ ಸೌಲಭ್ಯ |
| Community forestry | ಸಮುದಾಯ ಅರಣ್ಯ ಶಾಸ್ತ್ರ |
| Companion crop | ಜೊತೆ ಬೆಳೆ, ಸಹಬೆಳೆ (ಮುಖ್ಯ ಬೆಳೆ ಜೊತೆ ಬೆಳೆದ ಯಾವುದೇ ಉಪ ಬೆಳೆ) |
| Competitive enterprises | ಸಂಪನ್ಮೂಲ ಪೈಪೋಟಿ ಉದ್ಯಮಗಳು |
| Complementary enterprises | ಪರಿಪೂರಕ ಉದ್ಯಮಗಳು |
| Complete parasite | ಪೂರ್ಣ ಪರಾವಲಂಬಿ |
| Compliance | ಅನುಸರಣೆ |
| Component crops | ಸಹ ಬೆಳೆಗಳು |
| Compositae | ಸಂಕೀರ್ಣ ಪುಷ್ಪ |
| Composition | ಸಂಯೋಜನೆ |
| Composite sample | ಸಂಯುಕ್ತ ಮಾದರಿ |
| Compost | ಕಳಿತಗೊಬ್ಬರ, ಕಾಂಪೋಸ್ಟ್ |
| Compound fertilizer | ಮಿಶ್ರರಸಗೊಬ್ಬರ |
| Compound leaf | ಸಂಯುಕ್ತಪತ್ರ, ಸಂಯುಕ್ತ ಎಲೆ |
| Concentric | ಏಕಕೇಂದ್ರಕ |
| Concentrated organic manure | ಸಾಂದ್ರೀಕೃತ ಸಾವಯವ ಗೊಬ್ಬರ |
| Concolourd | ಒಂದೇ ವರ್ಣದ, ಸಮವರ್ಣದ |
| Condiment | ಸಂಬಾರ ವಸ್ತು |
| Cone | ಶಂಕು |
| Configuration | ಆಕೃತಿ |
| Conical | ಶಂಕುವಿನಾಕಾರ |
| Connective tissue | ಸಂಯೋಜಕ ಊತಕ |
| Conservation | ಸಂರಕ್ಷಣೆ, ಪಾಲನೆ |
| Conservation farming | ಸಂರಕ್ಷಣ ಬೇಸಾಯ |
| Conservatism | ಸಂಪ್ರದಾಯಪ್ರಿಯತೆ |
| Consistency | ಸ್ಥಿರತೆ |

| | |
|---|---|
| Consumer goods | ಗ್ರಾಹಕ ಸರಕುಗಳು |
| Consumption | 1) ಬಳಕೆ, 2) ಗ್ರಾಹ್ಯತೆ |
| Consumption loan | ಬಳಕೆ ಸಾಲ |
| Consumptive irrigation requirement | ಸಸ್ಯಬಳಕೆ ನೀರಾವರಿ ಅಗತ್ಯತೆ |
| Consumptive use | ಸಸ್ಯಬಳಕೆ ನೀರು |
| Consumer protection | ಗ್ರಾಹಕ ರಕ್ಷಣೆ |
| Contact herbicide | ಸಂಪರ್ಕ ಸಸ್ಯನಾಶಕ |
| Contact insecticide | ಸಂಪರ್ಕ ಕೀಟನಾಶಕ |
| Contact poison | ಸಂಪರ್ಕ ಪಾಷಾಣ |
| Contagious disease | ಸೋಂಕು ರೋಗ |
| Container | ಧಾರಕ |
| Contamination | ಮಲಿನತೆ, ಸೋಂಕುಗೊಳ್ಳುವಿಕೆ |
| Contingency cropping | ಅವಲಂಬಿಕ/ಆನುಷಂಗಿಕ ಬೆಳೆ ಬೆಳೆಯುವಿಕೆ |
| Continuity equation | ಅವಿಚ್ಛಿನ್ನ ಸಮೀಕರಣ |
| Continuous cropping | ಸತತ ಬೆಳೆ ಇಡುವಿಕೆ |
| Contour | ಸಮಪಾತಳಿ |
| Contour border irrigation | ಸಮಪಾತಳಿ ಅಂಚು ನೀರಾವರಿ |
| Contour bund interval | ಸಮಪಾತಳಿ ಒಡ್ಡುಗಳ ನಡುವಣ ಅಂತರ |
| Contour planting | ಸಮಪಾತಳಿ ಸಾಲುಬೆಳೆ ನಾಟುವಿಕೆ |
| Contour ploughing | ಸಮಪಾತಳಿ ಉಳುಮೆ |
| Contour strip cropping | ಸಮಪಾತಳಿ ಪಟ್ಟೆಬೆಳೆ ಬೆಳೆಯುವಿಕೆ |
| Contour terrace | ಸಮಪಾತಳಿ ಜಗತಿ |
| Contraction | ಸಂಕುಚನೆ |
| Controlled grazing | ನಿಯಂತ್ರಿತ ಮೇಯುವಿಕೆ |
| Controlled pollination | ನಿಯಂತ್ರಿತ ಪರಾಗಸ್ಪರ್ಶ |
| Control measure | ಹತೋಟಿ ಕ್ರಮ |
| Control plot | ನಿಯಂತ್ರಿತ ತಾಕು |
| Conventional kind | ಸಾಂಪ್ರದಾಯಿಕ ಬಗೆ |
| Conventional tillage | ಸಾಂಪ್ರದಾಯಿಕ ಉಳುಮೆ |
| Convergent | ಕೇಂದ್ರಾಭಿಮುಖ |
| Conversion factor | ಪರಿವರ್ತನೆ ಘಟಕ |

| | |
|---|---|
| Conveyor | ಸಾಗಿಸುವ ಸಾಧನ |
| Conveyance efficiency | ಸಾಗಣೆ/ಸಂವಹನ ಸಾಮರ್ಥ್ಯ (ನೀರಾವರಿ) |
| Co-operative better farming | ಸಹಕಾರಿ ಉತ್ತಮಿಕೆ ಬೇಸಾಯ |
| Co-operative farming | ಸಹಕಾರಿ ಬೇಸಾಯ |
| Co-operative joint farming | ಸಹಕಾರಿ ಜಂಟಿ ಬೇಸಾಯ |
| Co-operative organisation | ಸಹಕಾರಿ ಸಂಸ್ಥೆ |
| Co-operative tenant farming | ಸಹಕಾರಿ ಗೇಣಿ ಬೇಸಾಯ |
| Co-ordination | ಸಮನ್ವಯ |
| Copious irrigation | ಸಮೃದ್ಧ ನೀರಾವರಿ |
| Copper fungicide | ತಾಮ್ರ ಶಿಲೀಂಧ್ರನಾಶಕ |
| Coppice | ಕುರುಚಲು ಕಾಡು |
| Coppice farming | ಕೂಳೆ ಬೇಸಾಯ |
| *Corchorus capsularia* | ಜೂಟ್, ಸೆಣಬು |
| *Coriandrum sativum* | ಕೊತ್ತಂಬರಿ |
| Corm | ಕಾಂಡಗೆಡ್ಡೆ |
| Corniculate | ಕಿಗ್ಗೊಂಬು |
| Corolla | ದಳಸಮೂಹ, ದಳಪುಂಜ |
| Correction strip | ಸಮಪಾತಳಿ ಪಟ್ಟಿಗಳ ನಡುವಣ ಅನಿಯತ ಪಟ್ಟಿ ಪ್ರದೇಶ |
| Corrosion | ಸವೆತ |
| Cosmopolitan | ವಿಶ್ವವ್ಯಾಪಿ |
| Cost concept | ಬೆಲೆ ಪರಿಕಲ್ಪನೆ |
| Cost of cultivation | ಬೇಸಾಯದ ವೆಚ್ಚ (ಜಮೀನು ಬಾಡಿಗೆ ವೆಚ್ಚವೂ ಸೇರಿದಂತೆ) |
| Cost indices | ಬೆಲೆ ಸೂಚಕಗಳು |
| Cotton boll | ಹತ್ತಿಕಾಯಿ |
| Cotton ginning | ಹತ್ತಿಯಿಂದ ಬೀಜ ತೆಗೆಯುವುದು |
| Cotyledon | ಅಂಕುರ ದಳ, ಬೀಜದಳ |
| Cover crop | ಹೊದಿಕೆ ಬೆಳೆ |
| Covered smut cereal disease | ಆವರಿತ ಕಾಡಿಗೆ ಧಾನ್ಯರೋಗ |
| Cowpea | ಅಲಸಂದೆ |
| Crab caterpillar | ಏಡಿ ಕಂಬಳಿಹುಳು |

| | |
|---|---|
| Crane | ಭಾರ ಎತ್ತುವ ಯಂತ್ರ |
| Credit | ಸಾಲ, ಪತ್ತು |
| Credit worthiness | ಸಾಲ ಅರ್ಹತೆ |
| Creeper | ಬಳ್ಳಿ |
| Cribwork | ಊರೆಗಟ್ಟು, ಹರಿಕಟ್ಟು |
| Cricket | ಚಿಮ್ಮಂಡೆ |
| Critical difference | ಸಂದಿಗ್ಧ ಅಂತರ |
| Critical period (water) | ಸಂದಿಗ್ಧ ಅವಧಿ (ನೀರಾವರಿ) |
| Critical photoperiod | ಸಂದಿಗ್ಧ ಬೆಳಕು ಅವಧಿ |
| Critical stages | ಸಂದಿಗ್ಧ ಹಂತಗಳು |
| Crop | ಬೆಳೆ |
| Crop cafeteria | ಗುರುತಿಸಲಾದ ಸಮರ್ಥ ಬೆಳೆ ತಳಿಗಳ ಪ್ರಾತ್ಯಕ್ಷಿಕೆ |
| Crop calender | ಬೆಳೆ ಕಾರ್ಯಕ್ರಮಪಟ್ಟಿ |
| Crop combination | ಬೆಳೆ ಸಂಯೋಜನೆ |
| Crop canopy | ಬೆಳೆ ಮುಕುಟಭಾಗ |
| Crop coefficient | ಬೆಳೆ ಗುಣಾಂಕ |
| Crop competition | ಬೆಳೆ ಸ್ಪರ್ಧೆ/ಪೈಪೋಟಿ |
| Crop duration | ಬೆಳೆ ಅವಧಿ (ಮೊಳಕೆಯಿಂದ ಬಲಿಯುವವರೆಗೆ) |
| Crop ecology | ಬೆಳೆ ಪರಿಸರಶಾಸ್ತ್ರ/ಆವರಣಶಾಸ್ತ್ರ |
| Crop ecosystem | ಬೆಳೆ ಪರಿಸರವ್ಯವಸ್ಥೆ |
| Crop environment | ಬೆಳೆ ಪರಿಸರ |
| Crop equivalent yield | ಬೆಳೆ ಇಳುವರಿಯ ಮೌಲ್ಯ ಸಮಾನೀಕರಣ |
| Crop-husbandry | ಬೆಳೆ ಸಂಗೋಪನೆ |
| Crop insurance | ಬೆಳೆ ವಿಮೆ |
| Crop intensification | ಬೆಳೆ ತೀವ್ರಗೊಳಿಸುವಿಕೆ |
| Crop lodging | ಬೆಳೆ ಬಾಗುವಿಕೆ/ಅಡ್ಡಬೀಳುವಿಕೆ |
| Crop management | ಬೆಳೆ ನಿರ್ವಹಣೆ |
| Crop performance | ಬೆಳೆ ನಿರ್ವಾಹಕತೆ |
| Crop physiology | ಬೆಳೆ ಶರೀರಕ್ರಿಯಾಶಾಸ್ತ್ರ |
| Cropping pattern | ಬೆಳೆ ಮಾದರಿ |
| Crop production | ಬೆಳೆ ಉತ್ಪಾದನೆ |
| Crop productivity | ಬೆಳೆ ಉತ್ಪಾದಕತೆ |

| | |
|---|---|
| Crop residue | ಬೆಳೆ ಉಳಿಕೆ ಪದಾರ್ಥ (ಕೊಯ್ಲುನಂತರ ಹೊಲದಲ್ಲಿ ಉಳಿಯುವ ನಿರುಪಯುಕ್ತ ವಸ್ತು) |
| Crop residue management | ಬೆಳೆ ಉಳಿಕೆ ಪದಾರ್ಥಗಳ ನಿರ್ವಹಣೆ |
| Cropping system | ಬೆಳೆ ಪದ್ಧತಿ |
| Cropping scheme | ಬೆಳೆ ಬೆಳೆಯುವಿಕೆ ಯೋಜನೆ (ಗರಿಷ್ಠ ಇಳುವರಿಗಾಗಿ) |
| Crop residue | ಬೆಳೆ ಉಳಿಕೆ |
| Crop rotation | ಬೆಳೆ ಸರದಿ, ಬೆಳೆ ಪರಿವರ್ತನೆ |
| Crop sanitation | ಬೆಳೆ ನೈರ್ಮಲ್ಯತೆ |
| Crop season | ಉತ್ತಮ ಇಳುವರಿಗೆ ಸೂಕ್ತ ಹವಾಮಾನ |
| Crop technology | ಬೆಳೆ ತಾಂತ್ರಿಕತೆ |
| Crop tolerance | ಬೆಳೆ ಸಹಿಷ್ಣುತೆ |
| Crop water use efficiency | ಬೆಳೆ ನೀರು ಬಳಕೆ ಸಾಮರ್ಥ್ಯ |
| Crop year | ಬೆಳೆ ವರ್ಷ |
| Crop yield index | ಬೆಳೆ ಇಳುವರಿ ಸೂಚಕ |
| Cross fertilization | ಪರ ಪರಾಗಸ್ಪರ್ಶ |
| Cross inoculation | ಅಡ್ಡ ಒಳಸೇರಿಸುವಿಕೆ |
| Cross pollination | ಪರ/ಅನ್ಯ ಪರಾಗಸ್ಪರ್ಶ |
| Cross section | ಅಡ್ಡಕೊಯ್ತ |
| Crow bar | ಹಾರೆ, ಗಡಾರಿ |
| Crown | ಮುಡಿ, ಮುಕುಟ |
| Crown-grafting | ನೆತ್ತಿ ಕಸಿ ಮಾಡುವಿಕೆ |
| Cruciferous | ಸಾಸಿವೆ/ಕೋಸು ಗುಂಪಿನ ಪ್ರಭೇದಗಳು, ಕ್ರೂಷಪುಷ್ಪೀಯ |
| Crude fibre | ಕಚ್ಚಾನಾರು |
| Crude protein | ಕಚ್ಚಾ ಸಸಾರಜನಕ |
| Crumple | ಸುಕ್ಕಾಗಿಸು, ಮುದುರುವುದು |
| Crumb structure | ಮುರುಕಾಕೃತಿ |
| Crust | ಹೆಕ್ಕಳಿಕೆ, ಹೆಪ್ಪು |
| Cryptogams | ಪುಷ್ಪರಹಿತ/ಗುಪ್ತಪುಷ್ಪಿ ಸಸ್ಯಗಳು |
| Cucumber | ಸೌತೆಕಾಯಿ |
| Cucurbit | ಸೌತೆಕಾಯಿ ಗುಂಪು |
| *Cucurbita maxima* | ಕುಂಬಳ |

| | |
|---|---|
| Cultivar | ಸಾಗುವಳಿ ತಳಿ |
| Cultivation | ಸಾಗುವಳಿ, ಬೇಸಾಯ |
| Cultivator | 1) ಬೇಸಾಯಗಾರ, ಸಾಗುವಳಿಗಾರ, 2) ಸಾಗುವಳಿ ಸಾಧನ |
| Cultural control (pests) | ಪೀಡೆ ನಿರ್ವಹಣ ಸಾಗುವಳಿ ಪದ್ಧತಿಗಳು |
| Cultural practices | ಸಾಗುವಳಿ ಪದ್ಧತಿಗಳು |
| Culture | ಸಾಕಣೆ |
| Culture treatment | ಸೋಂಕು ಉಪಚರಣೆ |
| Culvert | ಅಡಿಗಾಲುವೆ |
| *Cumin* (*Cuminum*) *cyminum* | ಜೀರಿಗೆ |
| Cumulative run off | ನಿರ್ದಿಷ್ಟ ಅವಧಿಯಲ್ಲಿ ಹರಿದುಹೋದ ಒಟ್ಟು ನೀರಿನ ಪ್ರಮಾಣ |
| Cumulus | ರಾಶಿ, ಒಟ್ಟಿಲು, ಗುಡ್ಡೆ |
| Cup–feed drill | ಬಟ್ಟಲು ಕೂರಿಗೆ |
| Curative method | ಚಿಕಿತ್ಸಕ ವಿಧಾನ |
| *Curuma longa* | ಅರಿಷಿಣ |
| Curing | ಸಂಸ್ಕರಿಸುವಿಕೆ, ಸಂಸ್ಕರಣೆ |
| *Cuscuta reflexa* | ಆಕಾಶಬಳ್ಳಿ, ಅಮರಬಳ್ಳಿ |
| Cusec | ಕ್ಯೂಸೆಕ್ (ಒಂದು ಸೆಕೆಂಡಿಗೆ ಒಂದು ಕ್ಯೂಬಿಕ್ ಅಡಿಯಂತೆ ಹರಿಯುವ ನೀರಿನ ಪ್ರಮಾಣ) |
| Custard-apple | ಸೀತಾಫಲ |
| Cuticle | ಉಪಚರ್ಮ, ಮೇಲ್ಪದರ |
| Cut off time (irrigation) | ನೀರುಪೂರೈಕೆ ನಿಲ್ಲಿಸುವ ಅವಧಿ (ಮೇಲ್ಮೈ ನೀರಾವರಿಯಲ್ಲಿ) |
| Cut worm | ಕತ್ತರಿಸುವ ಹುಳು |
| Cyclic | ಚಕ್ರೀಯ |
| Cyclone | ಬಿರುಗಾಳಿ |
| Cyclonic storm | ಆವರ್ತ ಚಂಡಮಾರುತ, ಸುಂಟರಗಾಳಿ, ಬಿರುಗಾಳಿ |
| Cymose type | ಮಧ್ಯಾರಂಭಿ ಹೂಗೊಂಚಲು |
| Cyst | ಕವಚ ಕೋಶ, ಪೂತಿಕೋಶ |
| Cytokinin | ಕೋಶವಿಭಜನಕಾರಕ ವಸ್ತು |
| Cytology | ಕೋಶಶಾಸ್ತ್ರ |
| Cytophagy | ಕೋಶ ಭಕ್ಷಣೆ |

| | |
|---|---|
| Cytoplasm | ಕೋಶದ್ರವ್ಯ, ಜೀವದ್ರವ್ಯ |
| Cytotaxonomy | ಕೋಶ ವರ್ಗೀಕರಣಶಾಸ್ತ್ರ |

## D

| | |
|---|---|
| Dairy | ಹೈನಾಗಾರ |
| Dairy farming | ಹೈನುಗಾರಿಕೆ |
| Dam | ಅಣೆಕಟ್ಟು |
| Damage | ಹಾನಿ |
| Damping off | ಶೀತದಿಂದ ಸಾಯುವಿಕೆ, ಶೀತಕೊಳೆರೋಗ |
| Damsel bug | ಕನ್ನೆ ತಗಣೆ |
| Dapog method | ಡಪೋಗ್ ವಿಧಾನ |
| Date palm | ಖರ್ಜೂರ |
| Daughter-sucker | ಮರಿಕಂದು |
| Day cusec | ದೈನಿಕ ಕ್ಯೂಸೆಕ್ (24 ಗಂಟೆಗಳಲ್ಲಿ ಹರಿಯುವ ನೀರಿನ ಪ್ರಮಾಣ – ಕ್ಯೂಸೆಕ್‌ಗಳಲ್ಲಿ) |
| Day length | ದಿನದ ಅವಧಿ |
| Dead furrow | ಮೃತಸಾಲು |
| Dead-heart | ಸುಳಿ ಬಾಡಿ ಒಣಗುವಿಕೆ |
| Dead soil | ಮೃತಮಣ್ಣು |
| Dead-wood | ಮೃತದಾರು |
| Debris | ಮುರುಕಲು ಗುಪ್ಪೆ |
| De calcification | ಮಣ್ಣಿನಿಂದ ಕ್ಯಾಲ್ಸಿಯಂ ಕಾರ್ಬೋನೇಟ್ ಒಳಸೋಸಿಕೆ |
| Deciduous | ಎಲೆಯುದುರಿಸುವ |
| Decompose | ಕಳಿಯುವುದು, ವಿಘಟಿಸುವುದು, ವಿಭಜಿಸುವುದು |
| Decomposed rock | ವಿಘಟಿತ ಬಂಡೆ |
| Decomposition | ವಿಘಟನೆ, ಕಳಿಯುವಿಕೆ, ವಿಭಜನೆ |
| Decorticator | ಸಿಪ್ಪೆ ಸುಲಿಯುವ ಸಾಧನ |
| Decumbent | ತಲೆ ನೆಲಕ್ಕೆ ಬಾಗಿದ, ತಲೆ ನೆಲಕ್ಕೆ ಒರಗಿದ |
| Deep percolation loss | ಬೆಳೆ-ಬೇರುವಲಯದಿಂದ ಆಳಕ್ಕೆ ನೀರು ಜಿನುಗುವುದರಿಂದಾಗುವ ನಷ್ಟ |
| Deep placement | ಆಳಕ್ಕೆ ಸೇರಿಸುವುದು |
| Deep soil | ಆಳ ಮಣ್ಣು |

| | |
|---|---|
| Deep-rooted | ಆಳ ಬೇರಿನ |
| Deep tillage | ಆಳ ಉಳುಮೆ |
| Deep water rice | ಆಳ ನೀರಿನಲ್ಲಿ ಬೆಳೆಯುವ ಬತ್ತ (51 ಸೆಂ.ಮೀ. ನಿಂದ 5.6 ಮೀ. ಎತ್ತರ ನಿಂತ ನೀರಿನಲ್ಲಿ) |
| Deferred grazing | ಮುಂದೂಡಿದ ಮೇಯಿಸುವಿಕೆ |
| Deficiency diseases | ಪೋಷಕಾಂಶ ಕೊರತೆ ರೋಗಗಳು |
| Deflocculation | ಬೊಂತೆ ಬಿಡಿಸುವಿಕೆ |
| Defoliation | ಎಲೆ ಉದುರುವಿಕೆ |
| Deforestation | ಅರಣ್ಯನಾಶ |
| Deformed | ವಿರೂಪಿತ |
| Degenerated | ಅವನತಿಗೊಂಡ |
| Degradation | ಶಿಥಿಲಗೊಳ್ಳುವಿಕೆ, ಅವನತಿ |
| Degree day | ಬೆಳೆ ಉಷ್ಣಾಂಶ ಅಗತ್ಯತೆ ಸೂಚಕ |
| Dehiscent | ಬಿರಿಯುವ |
| Dehulling | ಸಿಪ್ಪೆ/ಹೊಟ್ಟು ಸುಲಿಯುವಿಕೆ |
| Dehydration | ನಿರ್ಜಲೀಕರಣ, ಜಲಕಳೆತ, ನೀರ್ದೆಗೆತ, ಒಣಗಿಸುವಿಕೆ |
| Delta | ನದೀಮುಖಜ ಭೂಮಿ |
| Delta (water) | ಒಂದು ಬೆಳೆಗೆ ಅಗತ್ಯವಿರುವ ನೀರು ಆಳ |
| Deltaic area | ಪ್ರಸ್ಥಭೂಮಿ ಪ್ರದೇಶ |
| Demand | ಬೇಡಿಕೆ |
| Demonstration | ಪ್ರಾತ್ಯಕ್ಷಿಕೆ |
| Demucilaging | ಲೋಳೆಯಾಗದಿರುವಿಕೆ |
| Denitrification | ಸಾರಜನಕ ಕಳೆತ |
| Dense growing | ದಟ್ಟವಾಗಿ ಬೆಳೆಯುವ |
| Density | ಸಾಂದ್ರತೆ |
| Depleting ranges | ಖಾಲಿಯಾಗುತ್ತಿರುವ ಹುಲ್ಲುಗಾವಲುಗಳು |
| Deployment | ಉದ್ದಸಾಲಿನಿಂದ ಅಗಲಸಾಲಿಗೆ ಹರಡುವುದು, ಅಭಿನಿಯೋಜನೆ |
| Deposit | ಶೇಖರಣೆ |
| Depot | ಕೋಠಿ |
| Depth of irrigation | ನೀರಾವರಿ ಆಳ |

| | |
|---|---|
| Depletion | ಬರಿದಾಗುವಿಕೆ |
| Depreciation | ಸವೆತ |
| Depression | ತಗ್ಗು |
| Desalination | ನಿರ್ಲವಣೀಕರಣ |
| Desert | ಮರುಭೂಮಿ |
| Desert locust | ಮರುಭೂಮಿ ಮಿಡತೆ |
| Desiccation | ಒಣಗಿಸುವಿಕೆ |
| Desiccator | ಒಣಗಿಸುವ ಯಂತ್ರ |
| Desilting | ಹೂಳುತೆಗೆಯುವಿಕೆ, ಒಂಡು ತೆಗೆಯುವಿಕೆ |
| Desuckering (tobacco) | ಮೋಸುಗಳನ್ನು ತೆಗೆಯುವಿಕೆ |
| Detasseling | ಮುಸುಕಿನ ಜೋಳದ ಎಳೆಯ ತೆನೆ ಕುಚ್ಚು ತೆಗೆಯುವಿಕೆ |
| Deterrant | ಅನಾಕರ್ಷಕ, ತಡೆಗಟ್ಟುವ |
| Detoxification | ವಿಷರಹಿತ ವಸ್ತುವಾಗಿ ಪರಿವರ್ತನೆಗೊಳ್ಳುವುದು |
| Detritus | ಸವಕಳಿ ಪದಾರ್ಥ |
| Developmental process | ಅಭಿವೃದ್ಧಿ ಪ್ರಕ್ರಿಯೆ |
| Devitalising process | ಜೀವಶಕ್ತಿ ಕಳೆತ ಪ್ರಕ್ರಿಯೆ |
| Dew | ಮಂಜು |
| Dew point | ಹಿಮಬಿಂದು |
| Dhaincha (*Sesbania cannabina*) | ಢೈಂಚ |
| Diadelphous stamen | ದ್ವಿಬಂಧಕೇಸರ, ದ್ವಿಸಂಘಕೇಸರ |
| Diamond backmoth | ವಜ್ರಬೆನ್ನಿನ ಪತಂಗ |
| Diapause | ನಿಶ್ಚೇಷ್ಟ ಸ್ಥಿತಿ/ಕಾಲ |
| Dibbler | ಗುಳಿದಸಿ |
| Dicotyledons | ದ್ವಿದಳ ಧಾನ್ಯ ಸಸ್ಯಗಳು |
| Die back | ತುದಿ ಒಣಗುವುದು |
| Diffuse | ವಿಸರಿತ |
| Diffusion resistance | ವಿಸರಣ ಪ್ರತಿರೋಧಕತೆ |
| Digging | ಅಗೆಯುವುದು |
| Dihybrid | ದ್ವಿಸಂಕರ |
| Dilute | ದುರ್ಬಲ |
| Dimension | ಅಳತೆ |
| Dimorphism | ದ್ವಿರೂಪತೆ |

| | |
|---|---|
| Dioecious | ಏಕಲಿಂಗಾಶ್ರಯಿ |
| Diploid | ದ್ವಿಗುಣಿತ |
| Direct drilling | ಕೂರಿಗೆಯಿಂದ ನೇರ ಬಿತ್ತನೆ |
| Disc coulter | ತಟ್ಟೆಕೂರಿಗೆ ತಾಳು |
| Disc harrow | ತವೆ ಕುಂಟೆ, ತವೆ ಹಲುಬೆ |
| Discolouration | ಬಣ್ಣಗೆಡುವಿಕೆ |
| Disc plough | ತವೆ ನೇಗಿಲು, ತಟ್ಟೆನೇಗಿಲು |
| Disc ridger | ತಟ್ಟೆನೇಗಿಲು ಬದುಕಾರಕ, ಏಣುಂಟುಮಾಡುವ ಸಲಕರಣೆ |
| Disputes committee | ವಿವಾದಗಳ ಸಮಿತಿ |
| Disease complexes | ರೋಗ ಸಂಕೀರ್ಣಗಳು |
| Disease resistance | ರೋಗ ನಿರೋಧಕ ಶಕ್ತಿ |
| Disinfectant | ಕ್ರಿಮಿನಾಶಕ, ಸೋಂಕು ನಿವಾರಕ |
| Disintegration | ಶಿಥಿಲವಾಗುವಿಕೆ, ವಿಘಟನೆ |
| Dispersal | ಪ್ರಸಾರ (ಪ್ರಸರಣೆ) |
| Dissemination | ಬೀಜ ಚೆಲ್ಲುವಿಕೆ/ಪ್ರಸರಣೆ |
| Distichous | ಎರಡು ಸಾಲಿನ |
| Distillation | ಬಟ್ಟಿ ಇಳಿಸುವಿಕೆ |
| Distilled water | ಬಟ್ಟಿ ಇಳಿಸಿದ ನೀರು |
| Distortion | ವಿಕೃತವಾಗುವಿಕೆ |
| Distribution efficiency | ವಿತರಣ ಸಾಮರ್ಥ್ಯ (ನೀರಾವರಿ ನೀರು) |
| Ditch | ಅಗಳು, ಕಾಲುವೆ, ಚರಂಡಿ, ಹಳ್ಳ |
| Diurnal variation | ದೈನಿಕ ಬದಲಾವಣೆ |
| Divalent base | ದ್ವಿಸಂಯೋಗಶಕ್ತಿ ಪ್ರತ್ಯಾಮ್ಲ |
| Diversion canal | ಜಲಮಾರ್ಗ ಬದಲಿಕೆ ನಾಲೆ |
| Diversified cropping | ವಿವಿಧ ಬೆಳೆ ಕೃಷಿ |
| Diversified farming | ವಿವಿಧ ಕೃಷಿ ಪದ್ಧತಿ |
| Dominant | ಪ್ರಬಲ |
| *Dolichos lab-lab,* Lab-lab puspurcus | ಅವರೆ |
| *Dolichos biflorus* | ಹುರುಳಿ |
| Dolomite | ಡಾಲೊಮೈಟ್ |
| Domestic agriculture | ಒಳನಾಡ ಕೃಷಿ |

| | |
|---|---|
| **Domestic product** | ಗೃಹೋಪಯೋಗಿ ಉತ್ಪನ್ನ |
| **Dominant** | ಪ್ರಬಲ |
| **Dormancy** | ಸುಪ್ತಾವಸ್ಥೆ |
| **Dormant spray** | ಸುಪ್ತ ಸಿಂಪರಣೆ |
| **Dosage** | ಗೊತ್ತಾದ ಪ್ರಮಾಣ |
| **Double cropping** | ದ್ವಿಬೆಳೆ ಬೆಳೆಯುವಿಕೆ (ಒಂದೇ ಜಮೀನಿನಲ್ಲಿ ವರ್ಷದಲ್ಲಿ ಸರಣಿಯಲ್ಲಿ ಎರಡು ಬೆಳೆ ಬೆಳೆಯುವಿಕೆ) |
| **Double cross** | ದ್ವಿಸಂಕರಣ |
| **Draft cattle** | ಎಳೆಯುವ ಎತ್ತು |
| **Dragon-fly** | ಕೊಡತಿ ಹುಳು |
| **Drain** | 1) ಬಸಿಯುವಿಕೆ, 2) ಬಸಿನೀರು ಚರಂಡಿ |
| **Drainage** | ಬಸಿಗಾಲುವೆ |
| **Drainage basin** | ಜಲಗ್ರಾಹಿ ಕ್ಷೇತ್ರ, ಬಸಿಗಾಲುವೆ ಕ್ಷೇತ್ರ |
| **Drainage channel** | ಬಸಿಗಾಲುವೆ ಕಂದಕ |
| **Drainage ditches** | ಬಸಿಗಾಲುವೆ ಚರಂಡಿಗಳು |
| **Drainage water** | ಗುರುತ್ವಾಕರ್ಷಣ ಜಲ, ಮುಕ್ತಜಲ |
| **Drastic** | ಚುರುಕಾದ |
| **Drill** | ಕೂರಿಗೆ |
| **Drill row** | ಕೂರಿಗೆ ಬಿತ್ತನೆ ಸಾಲು |
| **Drip irrigation** | ಹನಿ ನೀರಾವರಿ, ತೊಟ್ಟು ನೀರಾವರಿ |
| **Drizzling** | ತುಂತುರು ಮಳೆ |
| **Drosophila** | ಹಣ್ಣಿನ ನೊಣ |
| **Drought** | ಅನಾವೃಷ್ಟಿ, ಬರ, ಕ್ಷಾಮ |
| **Drought prone** | ಬರಪೀಡಿತ |
| **Drought resistant** | ಬರನಿರೋಧಕ |
| **Drought year** | ಬರಗಾಲದ ವರ್ಷ |
| **Drupe** | ಅಷ್ಟಿಫಲ |
| **Dry farming** | ಖುಷ್ಕಿ ಬೇಸಾಯ |
| **Dry land** | ಖುಷ್ಕಿ ಜಮೀನು |
| **Dry matter content** | ಒಣ ವಸ್ತುವಿನ ಅಂಶ |
| **Dry root rot or sore shin** | ಒಣಬೇರು ಕೊಳೆರೋಗ |
| **Dry spell** | ಶುಷ್ಕ ದಿನಗಳ ಅವಧಿ |

| | |
|---|---|
| Drying | ಒಣಗಿಸುವಿಕೆ |
| Duck-foot harrow | ಬಾತುಕೋಳಿ ಕಾಲಿನ ನೇಗಿಲು |
| Dune | ಮಣ್ಣಿನ ದಿಣ್ಣೆ |
| Dung | ಸಗಣಿ |
| Dust | ಧೂಳು, ಪುಡಿ |
| Dust mulch | ಧೂಳಿನ ಹೊದಿಕೆ |
| Duster | ಧೂಳಕ, ಧೂಳು, ಸಿಂಪಡಕ |
| Duty (water) | ಡ್ಯೂಟಿ (ಬೆಳೆ ಅವಧಿಯಲ್ಲಿ ಕ್ಯೂಸೆಕ್ ನೀರಿನಿಂದ ನೀರಾವರಿಗೊಂಡ ಕ್ಷೇತ್ರ) |
| Dwarfing gene | ಕುಬ್ಜ/ಗಿಡ್ಡಕಾರಕ ವಂಶವಾಹಿ |
| Dwarf virus | ಗಿಡ್ಡ ನಂಜುರೋಗ |
| Dwarf wheat variety | ಗಿಡ್ಡ ಗೋಧಿ ತಳಿ |

## E

| | |
|---|---|
| Ear cutting or climbing worm | ತೆನೆ ಕತ್ತರಿಸುವ ಹುಳು |
| Ear emergence | ತೆನೆ ಹೊರಡುವಿಕೆ |
| Earhead bug | ತೆನೆ ತಗಣೆ |
| Earhead midge | ತೆನೆ ಮಶಕ |
| Early maturity | ಶೀಘ್ರ ಬಲಿಯುವಿಕೆ |
